ಕನ್ನಡಪ್ರಭ
ಗುರುವಾರ 7.05.2026

ಗರಿಷ್ಠ 36°c | ಕನಿಷ್ಠ 25°c

ದಕ್ಷಿಣ ಕ್ಷೇತ್ರ ಇನ್ನಷ್ಟು ಪ್ರಗತಿ: ಸುಧಾ ವಿಶ್ವಾಸ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಜಯ ಗಳಿಸಿದ್ದಾರೆ. ಇದರಿಂದ ಮತ್ತೊಮ್ಮೆ ಈ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆ ಎಂಬುದು ಸಾಬೀತಾಗಿದೆ ಎಂದು ಪಾಲಿಕೆ ಮಾಜಿ ಸದಸ್ಯೆ ಸುಧಾ ಇಟ್ಟಿಗುಡಿ ಮಂಜುನಾಥ ತಿಳಿಸಿದ್ದಾರೆ. ಸಿಎಂ ಸಿದ್ದರಾಮಯ್ಯ,



ಡಿ.ಕೆ.ಶಿವಕುಮಾರ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ, ಕಾಂಗ್ರೆಸ್ ಹಿರಿಯ ಮುಖಂಡರು ಸೇರಿದಂತೆ ಸಚಿವರು, ವಿವಿಧ ಸಮುದಾಯದ ನಾಯಕರು, ಮುಖಂಡರು ಸೇರಿದಂತೆ ಪ್ರತಿಯೊಬ್ಬರೂ ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ್ದಾರೆ. ಮುಂಬರುವ ದಿನಗಳಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರವು ಮತ್ತಷ್ಟು ಅಭಿವೃದ್ಧಿ ಪಥದಲ್ಲಿ ಸಾಗಲಿದೆ. ರಾಜ್ಯ ಸರ್ಕಾರವು ₹100 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣಬಹುದಾಗಿದೆ. ಈ ಕೆಲಸವನ್ನು ಸಮರ್ಥ್ ಶಾಮನೂರು ಅವರು ನಿರ್ವಹಿಸಲಿದ್ದಾರೆಂಬ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.



ದಾವಣಗೆರೆಯ ಗಾಯತ್ರಿ ಪರಿವಾರದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ವಾಸುದೇವ ರಾಯ್ಕರ್ ಅವರನ್ನು ಶಂಕರ ಮಠದಲ್ಲಿ ಅಭಿನಂದಿಸಲಾಯಿತು. ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ ಶೆಣೈ, ಬೇಳೂರು ಸಂತೋಷಕುಮಾರ ಶೆಟ್ಟಿ, ಭಾವನ್ನಾರಾಯಣ, ಕೆ.ಎಚ್.ಮಂಜುನಾಥ, ಕೆ.ಸಿ.ಉಮೇಶ, ಸತ್ಯನಾರಾಯಣ ಮೂರ್ತಿ, ಲೋಹಿತಾಶ್ವ ಇತರರು ಇದ್ದರು.



ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಲ್ಲಿ ಮಲೇಬೆನ್ನೂರು ಪುರಸಭೆ ಆವರಣದಲ್ಲಿ ಮಂಗಳವಾರ ನಡೆದ ಸರಳ ಸಮಾರಂಭದಲ್ಲಿ ಶಾಸಕ ಬಿ.ಪಿ. ಹರೀಶ್ ನಾಲ್ವರು ವಿಕಲಚೇತನ ಫಲಾನುಭವಿಗಳಿಗೆ ತ್ರಿಚಕ್ರ ವಾಹನ ಸೌಲಭ್ಯವನ್ನು ವಿತರಿಸಿದರು. ಅಧ್ಯಕ್ಷರು, ಮುಖ್ಯಾಧಿಕಾರಿ, ಸದಸ್ಯರು ಇದ್ದರು.

ದಕ್ಷಿಣದಲ್ಲಿ ₹500 ಕೋಟಿ ಕಪ್ಪುಹಣ ಚಲಾವಣೆ

ಎಸ್‌ಡಿಪಿಐಗೆ ಮತ ಹಾಕದಂತೆ ತಡೆಯಲು ಕೆಲ ವಾರ್ಡ್‌ಗೆ ₹15 ಕೋಟಿ ಬಳಕೆ: ಅಫ್ಸರ್ ಕೊಡ್ಲಿಪೇಟೆ ಗಂಭೀರ ಆರೋಪ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷವೊಂದರಿಂದ ಸುಮಾರು ₹500 ಕೋಟಿ ಕಪ್ಪುಹಣ ಚಲಾವಣೆಯಾಗಿದ್ದು, ಪಾಲಿಕೆವ್ಯಾಪ್ತಿಯಕೆಲವಾರ್ಡ್‌ಗಳಲ್ಲಿಮುಖಂಡರಿಗೆ ₹15 ಕೋಟಿಕೊಟ್ಟು, ಎಸ್‌ಡಿಪಿಐಗೆಮತಹಾಕದಂತೆ ನೋಡಿಕೊಳ್ಳುವಂತೆ ಮಾಡಿದ್ದರು ಎಂದು ಕ್ಷೇತ್ರದ ಪರಾಜಿತ ಎಸ್‌ಡಿಪಿಐ ಅಧ್ಯಕ್ಷ ಅಫ್ಸರ್‌ಕೊಡ್ಲಿಪೇಟೆ ಆರೋಪಿಸಿದ್ದಾರೆ.

ನಗರದಲ್ಲಿಬುಧವಾರಸುದ್ದಿಗೋಷ್ಠಿಯಲ್ಲಿಮಾತನಾಡಿದ ಅವರು, ವಾರ್ಡ್‌ಗೆ ₹15 ಕೋಟಿಯಂತೆ ಕೊಟ್ಟ ಹಣದಿಂದಾಗಿ ನಮಗೆ ಬರಬೇಕಾಗಿದ್ದ ಇನ್ನೂ 10 ಸಾವಿರ ಮತಗಳು ನಮ್ಮ ಕೈತಪ್ಪಿವೆ. ಕೆಲ ವಾರ್ಡ್‌ನಲ್ಲಿಹಣಕೊಟ್ಟು, ಎಸ್‌ಡಿಪಿಐಗೆಮತಹಾಕುವಂತೆ ಮುಖಂಡರು ಹೇಳಿದರೆ, ಮತ್ತೆ ಕೆಲವರು ₹15 ಕೋಟಿ ಹಣದಲ್ಲಿ ಬಹುತೇಕ ಹಣ ತಾವು ಇಟ್ಟುಕೊಂಡಿದ್ದಾರೆ. ಒಂದುವೇಳೆ ₹15ಕೋಟಿಯಂತೆ ವಾರ್ಡ್‌ಗಳಿಗೆಕೊಡದಿದ್ದರೆದಕ್ಷಿಣಕ್ಷೇತ್ರಗೆಲ್ಲಬೇಕೆಂಬ ಬಿಜೆಪಿ ಕನಸು ನನಸಾಗಿರುತ್ತಿತ್ತು ಎಂದರು.

18,875 ಕುಟುಂಬಗಳು ಬೆಂಬಲಿಸಿದ್ದಕ್ಕೆ ಚಿರಋಣಿ: ನಾನು ತೀರ್ಮಾನ ಮಾಡಿಯಾಗಿದ್ದು, ದಾವಣಗೆರೆಯೇಇನ್ನುಮುಂದೆನನ್ನಕರ್ಮಭೂಮಿ. ಏನೂ ಅಲ್ಲದ ನನಗೆ 18,875 ಕುಟುಂಬಗಳು ಬೆಂಬಲಿಸಿವೆ.ಇವೆಲ್ಲಾಸ್ವಾಭಿಮಾನದಮತಗಳಾಗಿದ್ದು, ಆ ಎಲ್ಲ ಕುಟುಂಬಗಳಿಗೆ ನಾನು ಚಿರಋಣಿ. ಇಲ್ಲಿನ ಮಿಲ್ಲತ್ ಕಾಲನಿಗೆ ನನ್ನ ಮನೆಯನ್ನು ಬದಲಾಯಿಸಿದ್ದೇನೆ.ನನಗೆಇಲ್ಲಿಮತದಾರರುಓಟುಕೊಟ್ಟಿದ್ದಾರೆ, ನೋಟು ಕೊಟ್ಟಿದ್ದಾರೆ. ನಾನು ಒಂದೇ ಒಂದು ರುಪಾಯಿಸಹಖರ್ಚುಮಾಡಿಲ್ಲ. ಕ್ರೌಡ್‌ಫಂಡಿಂಗ್ ಮೂಲಕ ನನಗೆ ₹9.5 ಲಕ್ಷ ಸಹ ಬಂದಿದ್ದು, ಅದನ್ನೇ ಬಳಸಿ ಚುನಾವಣೆ ಮಾಡಿದ್ದೇನೆ ಎಂದು ಹೇಳಿದರು.



ದಾವಣಗೆರೆಯಲ್ಲಿ ಬುಧವಾರ ಪರಾಜಿತ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ನಾನೊಬ್ಬ ಹೋರಾಟಗಾರ. ವಿಧಾನಸಭೆ ಚುನಾವಣೆಗೆ ಇದು ನನ್ನ ಚೊಚ್ಚಲ ಸ್ಪರ್ಧೆಯಾಗಿತ್ತು. 18 ಸಾವಿರಕ್ಕೂ ಅಧಿಕ ಕುಟುಂಬ ನನ್ನ ಜೊತೆಗಿವೆ. ಮುಂದಿನ ದಿನಗಳಲ್ಲಿ ಮಹತ್ತರವಾದ ಮಹಾನಗರ ಪಾಲಿಕೆಚುನಾವಣೆಬರಲಿದೆ. ಪಾಲಿಕೆಚುನಾವಣೆಗೂ ನಮ್ಮ ಪಕ್ಷ ಸ್ಪರ್ಧಿಸಲಿದೆ. ಈಗಾಗಲೇ ಅನೇಕರು ಆಕಾಂಕ್ಷಿಗಳು ಮುಂದೆ ಬಂದಿದ್ದಾರೆ. ಜನರಿಗೆ ಧನ್ಯವಾದ ತಿಳಿಸಲು ಹೋದಾಗ ಎಸ್‌ಡಿಪಿಐಗೆ ಬೆಂಬಲಿಸುವಾಗಿಹೇಳುತ್ತಿದ್ದಾರೆ. ಇದುಆಶಾದಾಯಕ ಸಂಗತಿ. ವಿಧಾನಸಭೆಚುನಾವಣೆಗೆನನಗಿಂತಒಳ್ಳೆಯ ವ್ಯಕ್ತಿ ಬಂದರೆ ಖಂಡಿತಾ ಅವಕಾಶ ನೀಡುತ್ತೇವೆ. ಎಂಎಲ್‌ಸಿ ಕೆ.ಅಬ್ದುಲ್ ಜಬ್ಬಾರ್‌ಸಹ ನಮ್ಮ ಪಕ್ಷದ ತತ್ವ, ಸಿದ್ಧಾಂತ ಒಪ್ಪಿ ಬಂದರೆ ಸ್ವಾಗತಿಸುತ್ತೇವೆ. ನಮ್ಮ ಪಕ್ಷ ಈ ಬಗ್ಗೆ ತೀರ್ಮಾನಿಸುತ್ತದೆ ಎಂದರು.

ಶ್ಯಾಡೋ ಎಂಎಲ್‌ಎ ಆಗಿಯೇ ಕೆಲಸ: ಅಕ್ರಮವಾಗಿರಲಿ, ಸಕ್ರಮವೇ ಆಗಿರಲಿ ಕಾಂಗ್ರೆಸ್ಸಿನ ಸಮರ್ಥ ಎಂ. ಶಾಮನೂರು ಗೆಲುವು ಗೆಲುವೇ. ಸಮರ್ಥಗೆನಾನುಮನವಿಮಾಡುತ್ತೇನೆ. ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ₹100 ಕೋಟಿ ಅನುದಾನ ಅಲಾಟ್ ಆಗಿದೆ. ಆದ್ಯತೆ ಮೇರೆಗೆ ಕ್ಷೇತ್ರದಲ್ಲಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸಿ, ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ, ಜನವಸತಿ ಪ್ರದೇಶಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲಿ. ಕ್ಷೇತ್ರದಲ್ಲಿ ನಾನು ಶ್ಯಾಡೋ ಎಂಎಲ್‌ಎ ಆಗಿಯೇ ಕೆಲಸ ಮಾಡುತ್ತೇನೆ. ನಿಮ್ಮ ಅಂಕುಡೊಂಕುಗಳನ್ನು ತೋರಿಸಿ ಕೊಡುತ್ತೇನೆ. ಅಭಿವೃದ್ಧಿ ವಿಚಾರ, ಕ್ಷೇತ್ರದ ಜನರ ಸಮಸ್ಯೆ ವಿಚಾರವಾಗಿ ನನ್ನ ಸಲಹೆ, ಸಹಕಾರ ನೀಡಲು ನಾನು ಸದಾ ಸಿದ್ಧ ಎಂದು ಅವರು ಘೋಷಿಸಿದರು.

ಇಡೀ ಸರ್ಕಾರ, ಸಚಿವರೇ ಉಪ ಚುನಾವಣೆ ಮಾಡಲು ಇಲ್ಲಿಗೆ ಬಂದಿದ್ದರು. ಕೆಲ ಸ್ಲಂಗಳಲ್ಲಿ ಕಾಂಗ್ರೆಸ್ಸಿನವರುಅಪಪ್ರಚಾರಮಾಡಿದ್ದರು. ಕಾಂಗ್ರೆಸ್ ಪಕ್ಷಸೋತರೆಬಿಜೆಪಿಅಧಿಕಾರಕ್ಕೆಬರುತ್ತದೆ. ಗೃಹಲಕ್ಷ್ಮಿ ಯೋಜನೆಯನ್ನೇ ನಿಲ್ಲಿಸುತ್ತಾರೆಂಬ ವದಂತಿ ಹಬ್ಬಿಸಿದರು. ಕೆಲವೊಂದಿಷ್ಟು ಮುಗ್ಧ ಜನರು ಅದನ್ನೇ ನಂಬಿದರು. ಉಪ ಚುನಾವಣೆಯ ಮೂಲಕ ದಾವಣಗೆರೆದಕ್ಷಿಣಜನರುಬದಲಾವಣೆಬಯಸಿದ್ದರು ಎಂಬ ಸಂದೇಶ ರವಾನೆಯಾಗಿದೆ. ಮುಂದಿನ ದಿನಗಳಲ್ಲಿ ಅಂತಹ ಬದಲಾವಣೆಯನ್ನು ಕಾಣಬಹುದು ಎಂದು ಅಫ್ಸರ್‌ಕೊಡ್ಲಿಪೇಟೆ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎ.ಆರ್.ತಾಹೀರ್, ಉಪಾಧ್ಯಕ್ಷ ರಜ್ವಿ ರಿಯಾಜ್ ಅಹಮ್ಮದ್, ಜಿಲ್ಲಾ ಸಮಿತಿ ಸದಸ್ಯರಾದ ಇಸ್ಮಾಯಿಲ್ ಜಬೀವುಲ್ಲಾ, ಮಹಮ್ಮದ್ ಮೊಹಸೀನ್, ಮನ್ಸೂರ್ ಅಲಿ ಇತರರಿದ್ದರು.

ಉಪಚುನಾವಣೆಯಲ್ಲಿ ಸರ್ಕಾರದ ಕೈಗೊಂಬೆಯಾದ ಅಧಿಕಾರಿಗಳು

■ ಸ್ಟ್ರಾಂಗ್ ರೂಂ ಬೀಗ ಯಾರ ಮನೆಯಲ್ಲಿದೆ, ಯಾರ ಜೇಬಿನಲ್ಲಿದೆ: ಎಸ್‌ಡಿಪಿಐ ಪ್ರಶ್ನೆ

ದಾವಣಗೆರೆ: ದಕ್ಷಿಣಕ್ಷೇತ್ರ ಉಪಚುನಾವಣೆಯಲ್ಲಿ ಜಿಲ್ಲಾಡಳಿತ, ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡಿದ್ದು, ಚುನಾವಣೆ ದಿನವೇ ಪ್ರತಿ ಬೂತ್‌ಗೆ ಭೇಟಿ ನೀಡಿದ್ದ ಜಿಲ್ಲಾ ಸಚಿವರ ಬಗ್ಗೆ ಮಾಹಿತಿ ನೀಡಿದರೆ ಲೊಕೇಷನ್ ಕಳಿಸುವಂತೆಎಸ್ಪಿಹೇಳಿದ್ದು, ಐಎಎಸ್-ಐಪಿಎಸ್ ಅಧಿಕಾರಿಗಳು ಯಾರಪರಕೆಲಸಮಾಡುತ್ತಿದ್ದಾರೆ ಎಂದು ಕ್ಷೇತ್ರದ ಎಸ್‌ಡಿಪಿಐ ಪಕ್ಷದ ಪರಾಜಿತ ಅಭ್ಯರ್ಥಿ ಅಫ್ಸರ್‌ಕೊಡ್ಲಿಪೇಟೆ ಕಿಡಿಕಾರಿದ್ದಾರೆ.

ಮತ ಎಣಿಕೆ ಕೇಂದ್ರದ 3 ಸ್ಟ್ರಾಂಗ್ ರೂಂಗಳ ಬೀಗಗಳೇ ಕಾಣೆಯಾಗಿವೆಯೆಂಬ ಸಬೂಹು ಹೇಳಿದರು. ಇಲ್ಲಿ ದೊಡ್ಡದಾದ ಚುನಾವಣಾ ಅಕ್ರಮ ನಡೆದಿದೆ. ಈ ಬಗ್ಗೆ ಸ್ವತಂತ್ರ ಏಜೆನ್ಸಿ ಮೂಲಕ ತನಿಖೆಯಾಗಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತವಿದ್ದು, ತಮ್ಮ ಅಧಿಕಾರ ಬಳಸಿಕೊಂಡುಅವ್ಯವಹಾರಮಾಡಿದ್ದಾರೆಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಚುನಾವಣಾಆಯೋಗದನಿಯಮಾನುಸಾರ ಮತ ಎಣಿಕೆ ಸಿಬ್ಬಂದಿ, ಎಲ್ಲ ಅಭ್ಯರ್ಥಿಗಳನ್ನು ಕರೆಸಿ, ತೀರ್ಮಾನಕೈಗೊಳ್ಳಬೇಕಾಗಿತ್ತು. ಬಾಷಾ ನಗರ, ಆಜಾದ್ ನಗರ ಎರಡು ಬೂತ್‌ಗಳಲ್ಲಿ ತಾಂತ್ರಿಕ ಸಮಸ್ಯೆ ಅಂತಾ ಹೇಳಿದ್ದರು. ಸ್ಟ್ರಾಂಗ್ ರೂಂಗಳ ಬೀಗ ಯಾರ ಮನೆಯಲ್ಲಿದೆ? ಯಾರ ಜೇಬಿನಲ್ಲಿ ಬೀಗಗಳು ಇದ್ದವು? ದಕ್ಷಿಣದ ಮತ ಎಣಿಕಾ ಕೇಂದ್ರದಲ್ಲಿ ಅಧಿಕಾರ ದುರುಪಯೋಗ ಆಗಿರುವುದು ಸ್ಪಷ್ಟವಾಗಿದೆ. ಆರ್‌ಓ ಆರಂಭದ ದಿನದಿಂದಲೂ ಆಡಳಿತ ಪಕ್ಷದ ಕೈಗೊಂಬೆಯಾಗಿ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದರು.

ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಮತ ಎಣಿಕೆ ದಿನವೇ ಚುನಾವಣಾ ಆಯೋಗಕ್ಕೆ ಇ-ಮೇಲ್ ಮೂಲಕ ದೂರು ನೀಡಿದ್ದಾರೆ. ಬಿಜೆಪಿ ಅಭ್ಯರ್ಥಿ ಸಹ ಕೇಂದ್ರ, ರಾಜ್ಯ ಚುನಾವಣಾ ಆಯೋಗಕ್ಕೆ ದೂರು ನೀಡಿ, ಕಾನೂನು ಹೋರಾಟ ನಡೆಸುವುದಾಗಿ ಹೇಳಿದ್ದಾರೆ. ಹಾಗಾಗಿ, ನಾವು ಆಯೋಗಕ್ಕಾಗಲೀ, ನ್ಯಾಯಾಲಯದ ಮೊರೆಯಾಗಲೀ ಹೋಗುತ್ತಿಲ್ಲ. ಒಂದುವೇಳೆ ಆಮ್ ಆದ್ಮಿ ಪಕ್ಷ, ಬಿಜೆಪಿ ಅಭ್ಯರ್ಥಿಗಳು ಈ ಬಗ್ಗೆ ಮುಂದುವರಿಯದಿದ್ದರೆ ಆಯೋಗಕ್ಕೆ ದೂರು ನೀಡುವ, ನ್ಯಾಯಾಲಯದ ಮೊರೆ ಹೋಗುವ ಕೆಲಸ ಎಸ್‌ಡಿಪಿಐ ಮಾಡಲಿದೆ ಎಂದು ಅವರು ಸ್ಪಷ್ಟಪಡಿಸಿದರು.

ಸುದ್ದಿ ಸಿಂಚನ

ದಾಖಲೆ ಇಲ್ಲದ ಹೋಂ ಸ್ಟೇ ಮಾಲೀಕರಿಗೆ ಎಚ್ಚರಿಕೆ

ದಾವಣಗೆರೆ: ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳು ದಿನೇದಿನೇ ಹೆಚ್ಚಾಗುತ್ತಿವೆ. ಪ್ರವಾಸಿಗರ ಸುರಕ್ಷತೆ ಮತ್ತು ಗುಣಮಟ್ಟದ ಸೇವೆ ದೃಷ್ಟಿಯಿಂದ ಎಲ್ಲ ಹೋಂ ಸ್ಟೇಗಳು ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ನೋಂದಣಿ ಪತ್ರವಿಲ್ಲದೇ ಕಾರ್ಯನಿರ್ವಹಿಸುತ್ತಿರುವ ಮಾಲೀಕರು ಗ್ರಾಪಂಯಿಂದ ನಿರಾಕ್ಷೇಪಣಾ ಪತ್ರ, ಇ-ಖಾತಾ ಅಥವಾ ಪಹಣಿ, ಪೊಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ, ತಹಸೀಲ್ದಾರರಿಂದ ಪಡೆದ ವಾಸ ಸ್ಥಳ ದೃಢೀಕರಣ ಪತ್ರ, ಮಾಲೀಕರ ಆಧಾರ್ ಕಾರ್ಡ್ ಮತ್ತು ಭಾವಚಿತ್ರ, ಹೋಮ್ ಸ್ಟೇ ಯೋಜನೆ ಛಾಯಾಚಿತ್ರಗಳ ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಪಿ.ಬಿ. ರಸ್ತೆ, ದಾವಣಗೆರೆ- 577002, ದೂ: 08192- 230123 ಇಲ್ಲಿಗೆ ಸಂಪರ್ಕಿಸಬಹುದು ಎಂದು ಇಲಾಖೆ ಸಹಾಯಕ ನಿರ್ದೇಶಕಿ ಕಾವ್ಯ ತಿಳಿಸಿದ್ದಾರೆ.

ಶುಲ್ಕ ಮರುಪಾವತಿ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ನೀಡಲಾಗುವ ''ಶುಲ್ಕ ಮರುಪಾವತಿ'' ಸೌಲಭ್ಯದ ಅರ್ಜಿ ಸಲ್ಲಿಕೆ ಅವಧಿಯನ್ನು ಮೇ 16 ರವರೆಗೆ ವಿಸ್ತರಿಸಲಾಗಿದೆ. ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ-1ರ ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳು ಸದುಪಯೋಗ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://ssp.postmatric.karnataka.gov.in ರಲ್ಲಿ ಪಡೆಯಬಹುದು. ಇಲಾಖಾ ಸಹಾಯವಾಣಿ ದೂ: 8050770004, ಇ-ಮೇಲ್ ವಿಳಾಸ bcwdhelpline@gmail.com ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ದೂ: 1902 ಅಥವಾ ಇ-ಮೇಲ್ ವಿಳಾಸ: postmatrichelp@karnataka.gov.in ಇಲ್ಲಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರೇಣುಕಾದೇವಿ ತಿಳಿಸಿದ್ದಾರೆ.

ಕನ್ನಡ ಕಾರ್ಯಕ್ರಮ ಯುವಜನರಿಗೆ ತಲುಪಲಿ: ಯು.ಎನ್.ಸಂಗನಾಳಮಠ



ಹೊನ್ನಾಳಿ: ಕನ್ನಡ ಸಾಹಿತ್ಯ ಪರಿಷತ್ ಯುವಪೀಳಿಗೆಯವರಿಗೆ ಕನ್ನಡ ಕಾರ್ಯಕ್ರಮಗಳ ಮೂಲಕ ಸಾಹಿತ್ಯ ಮತ್ತು ಸಾಹಿತಿಗಳ ಮಾಹಿತಿಗಳನ್ನು ಹೆಚ್ಚು ಹೆಚ್ಚು ಪ್ರಸ್ತುತಪಡಿಸುವ ಕೆಲಸ ಮಾಡಬೇಕು ಎಂದು ಹಿರಿಯ ಸಾಹಿತಿ ಯು.ಎನ್. ಸಂಗನಾಳಮಠ ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ ಹೊನ್ನಾಳಿ ಘಟಕದಿಂದ ಮಂಗಳವಾರ ಹಿರೇಕಲ್ಮಠದ ಕಸಾಪ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಪರಿಷತ್‌ನ 112ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕ.ಸಾ..ಪ. 1915ರ ಮೇ 5ರಂದು ಅಂದಿನ ಸರ್‌ಎಂ.ವಿಶ್ವೇಶ್ವರಯ್ಯ, ಎಚ್.ವಿ. ನಂಜುಂಡಯ್ಯ, ಸ.ಸಿ. ಪಟ್ಟಣಶೆಟ್ಟಿ, ಆಲೂರು ವೆಂಕಟರಾಯರು, ಕೃಷ್ಣರಾಯ ಇತರರ ಪ್ರಯತ್ನದಿಂದ ಮೈಸೂರು ಅರಸ ಕೃಷ್ಣರಾಜ ಒಡೆಯರ್‌ನೆರವಿನಿಂದ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾಯಿತು ಎಂದು ಹೇಳಿದರು. ಅಧ್ಯಕ್ಷತೆ ಪರಿಷತ್ ತಾಲೂಕು ಅಧ್ಯಕ್ಷ ಜಿ. ಮುರಿಗಪ್ಪ ಗೌಡ ವಹಿಸಿ, ಕನ್ನಡ ಸುಮಾರು 2 ಸಾವಿರ ವರ್ಷಗಳ ಇತಿಹಾಸವಿರುವ ಅದ್ಭುತ ಭಾಷೆಯಾಗಿದೆ. ಕನ್ನಡವನ್ನು ಬಳಸುತ್ತಾ ಬೆಳೆಸಬೇಕಾದ ನೈತಿಕ ಹೊಣೆ ಪ್ರತಿಯೊಬ್ಬ ಕನ್ನಡಿಗರ ಮೇಲಿದೆ ಎಂದರು. ಕ.ಸಾ.ಪ. ಮಾಜಿ ಅಧ್ಯಕ್ಷ ಎಂ.ಎಸ್. ರೇವಣಪ್ಪ, ಗೌರವ ಕಾರ್ಯದರ್ಶಿ ಕೆ.ಶೇಖರಪ್ಪ, ಕತ್ತಿಗೆ ನಾಗರಾಜ್, ಕುಂದೂರು ಬಸವರಾಜಪ್ಪ, ಮೌನೇಶಾಚಾರ್, ಮಹಿಳಾ ಸದಸ್ಯೆ ಎ.ಜಿ.ಸುನಂದ, ಚಂದ್ರಪ್ಪ, ಸಿದ್ದಮ್ಮ ಪಿ.ಎಂ.ಸಿದ್ದಯ್ಯ, ಸಾಹಿತ್ಯ ಆಸಕ್ತರು ಇದ್ದರು. ವಿಶ್ರಾಂತ ಉಪನ್ಯಾಸಕ ಹಾಗೂ ತಾಲೂಕಿನ ಹಿರಿಯ ಸಾಹಿತಿ ಯು.ಎನ್. ಸಂಗನಾಳಮಠ ಅವರನ್ನು ಸನ್ಮಾನಿಸಲಾಯಿತು.

ದಕ್ಷಿಣದಲ್ಲಿ ಬಿಜೆಪಿ ಅಧಿಕಾರಕ್ಕೆ ತಂದ ಯಡಿಯೂರಪ್ಪ

ಅಭಿಮಾನೋತ್ಸವ ನಿಮಿತ್ತ ಕಾರ್ಯಕರ್ತರ ಸಭೆಯಲಿ ರೇಣು | ಲೋಗೋ ಪ್ರತಿ ಅನಾವರಣ

• **ಕನ್ನಡಪ್ರಭ ವಾರ್ತೆ** ಹೊನ್ನಾಳಿ

ನೂರಾರು ಜನಕ್ಕೆ ರಾಜಕೀಯ ಕ್ಷೇತ್ರದಲ್ಲಿ ಜನ್ಮಕೊಟ್ಟು, ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಶ್ರಮಿಸಿದ ಏಕೈಕ ನಾಯಕ ಎಂದರೆ ಅದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಬಿ.ಎಸ್.ಯಡಿಯೂರಪ್ಪ ಅವರು ಐದು ದಶಕಗಳ ಯಶಸ್ವಿ ರಾಜಕೀಯ ಜೀವನ ಪೂರೈಸಿದ ಹಿನ್ನೆಲೆ ಮೇ 9ರಂದು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆ ಬುಧವಾರ ತಮ್ಮ ನಿವಾಸದಲ್ಲಿ ಕಾರ್ಯಕರ್ತರ ಸಭೆ ನಡೆಸಿದ ಅವರು ಸಮಾರಂಭದಲೋಗೋಪ್ರತಿಅನಾವರಣಗೊಳಿಸಿಮಾತನಾಡಿದರು. ಬಿ.ಎಸ್.ಯಡಿಯೂರಪ್ಪ ಅವರ ಕಾರ್ಯಕ್ಷೇತ್ರವಾದ ಶಿಕಾಪುರದಲ್ಲಿ ಪುರಸಭೆ ಅಧ್ಯಕ್ಷರಾಗುವ ಮೂಲಕ ತಮ್ಮ ರಾಜಕೀಯ ಜೀವನ ಆರಂಭಿಸಿದರು. ಅಂದಿನಿಂದ ಇಂದಿನವರೆಗೂ ಅವರು ಹಲವಾರು ಪಾದಯಾತ್ರೆಗಳು, ಹೋರಾಟಗಳ ಜೀವನದ ಮೂಲಕ ಯಶಸ್ವಿ ಮೆಟ್ಟಿಲುಗಳನ್ನು ಏರಿದವರು. ಈಗ ರಾಜಕೀಯ ಜೀವನದಲ್ಲಿ 50 ವಸಂತಗಳನ್ನು ಪೂರೈಸಿದ್ದಾರೆ ಎಂದರು.

ಯಡಿಯೂರಪ್ಪ ಅಧಿಕಾರ ಅವಧಿಯಲ್ಲಿ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆ, ಭದ್ರಾ ನಾಲೆ ಆಧುನೀಕರಣ ಸೇರಿದಂತೆ ಹೊನ್ನಾಳಿ, ನ್ಯಾಮತಿ ಅವಳಿ ತಾಲೂಕುಗಳ ಅಭಿವೃದ್ಧಿಗಾಗಿ ₹900 ಕೋಟಿಗೂ ಅಧಿಕ ಅನುದಾನ, ಕೆರೆಗೆ ನೀರು ತುಂಬಿಸಿ ಯೋಜನೆಗೆ ₹519 ಕೋಟಿ ನೀಡಿದ್ದಾರೆ ಎಂದು ಸ್ಮರಿಸಿದರು.



ಬಿಎಸ್‌ವೈ ಅಭಿಮಾನೋತ್ಸವದ ಲೋಗೋ ಪ್ರತಿಯನ್ನು ಎಂ.ಪಿ.ರೇಣುಕಾಚಾರ್ಯ ಅನಾವರಣಗೊಳಿಸಿದರು.

ಅಭಿಮಾನೋತ್ಸವಕ್ಕೆ 10 ಸಾವಿರಕ್ಕೂ ಹೆಚ್ಚು ಜನ: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ನ್ಯಾಮತಿ ಮತ್ತು ಹೊನ್ನಾಳಿ ಅವಳಿ ತಾಲೂಕುಗಳಿಂದ ಸುಮಾರು 150 ಬಸ್‌ಗಳ ಮೂಲಕ 10 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರು, ಅಭಿಮಾನಿಗಳು ರೈತರು, ಮಹಿಳೆಯವರು ಭಾಗವಹಿಸಲಿದ್ದಾರೆ. ನಾಡಿನ ಎಲ್ಲ ಸಮಾಜದ ಮಠಾಧಿಪತಿಗಳು, ಯಡಿಯೂರಪ್ಪ ಅವರ ರಾಜಕೀಯ ಒಡನಾಡಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜಕೀಯ ಚಾಣಕ್ಯ ಹಾಗೂ ದೇಶದ ಗೃಹಸಚಿವ ಅಮಿತ್ ಶಾ ಸೇರಿದಂತೆ ಹಾಲಿ ಮಾಜಿ ಸಚಿವರು, ಸಂಸದರು. ಶಾಸಕರು ಸ್ಥಳೀಯ ಸಂಘ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅಂದು ಬೆಳಗ್ಗೆ 10 ಗಂಟೆಯಿಂದ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಜನರಿಗೆ ಊಟ, ತಿಂಡಿ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ತಿಳಿಸಿದರು.

ಅಧ್ಯಕ್ಷ ನಾಗರಾಜ್, ಮಾಜಿ ಅಧ್ಯಕ್ಷ ಜೆ.ಕೆ.ಸುರೇಶ್, ಕುಬೇಂದ್ರಪ್ಪ, ಸುರೇಂದ್ರ ನಾಯ್ಕ, ಮಾರುತಿ ನಾಯ್ಕ, ಕೆ.ಇ.ನಾಗರಾಜಪ್ಪ, ರಮೇಶ್ ಗೌಡ, ಎಂ.ಎಸ್. ಪಾಲಾಕ್ಷಪ್ಪ, ಶಿವು ಹುಡೇದ್, ಬಾಬು ಹೋಬಳದಾರ್ ರಾಘವೇಂದ್ರ, ಬೀರಪ್ಪ, ಮಂಜುನಾಥ ನೆಲಹೊನ್ನೆ, ನೂರಾರು ಜನ ಮುಖಂಡರು, ಕಾರ್ಯಕರ್ತರು ಇದ್ದರು.

ಪವರ್ ಲಿಫ್ಟಿಂಗ್: ಸುಜೀಲ್ ಪ್ರಥಮ- ಶಾಸಕ ಅಭಿನಂದನೆ

ದಾವಣಗೆರೆ: ಮಂಗಳೂರಿನ ಕಿನ್ನಿಗೋಳಿಯಲ್ಲಿ ಮೇ 1 ರಿಂದ 3 ರವರೆಗೆ ನಡೆದ ರಾಜ್ಯಮಟ್ಟದ ಪವರ್‌ಲಿಫ್ಟಿಂಗ್‌ಸ್ಪರ್ಧೆಯಜ್ಯೂನಿಯರ್‌ಮತ್ತು ಸೀನಿಯರ್‌ವಿಭಾಗದಲ್ಲಿ ನಗರದ ಸುಜೀಲ್ ಅಹ್ಮದ್ ಭಾಗವಹಿಸಿ ಒಟ್ಟು 735 ಕೆಜಿ ಭಾರ ಎತ್ತುವ ಮೂಲಕ ಪ್ರಥಮ ಸ್ಥಾನ ಪಡೆದರು. ಜಿಲ್ಲಾ ಪೊಲೀಸ್ ಇಲಾಖೆಯ ರಾಷ್ಟ್ರಪತಿ ಸೇವಾ ಪದಕ ಪುರಸ್ಕೃತ ಎಚ್.ದಾದಾಪೀರ್‌ಹಾಗೂ ಶೈಲಜಾದಂಪತಿಪುತ್ರ ಸುಜೀಲ್‌ಸಾಧನೆಗೆಶಾಸಕ ಸಮರ್ಥ ಶಾಮನೂರು ಅಭಿನಂದಿಸಿದ್ದಾರೆ.



ಹರಿಹರ: 11ರಿಂದ ಮೂಲ ದುರ್ಗಾದೇವಿ ದೇಗುಲ, ನಾಗದೇವರ ಸಪ್ತಮ ವರ್ಧಂತಿ

ತುಲಾಭಾರ ಸೇವೆ | ದುರ್ಗಾದೇವಿ ಜಾತ್ರೆ ನಿಮಿತ್ತ ಕುಂಭಮೇಳ



ಸದ್ಗುರು ಅಪ್ಪಾಜಿ ಅವರ ಸಾನಿಧ್ಯದಲ್ಲಿ ಹಂದರಗಂಬ ಪೂಜೆ ನೆರವೇರಿಸಲಾಯಿತು.

ಹರಿಹರ: ಇಲ್ಲಿಗೆಸಮೀಪದ ಕೊಡಿಯಾಲ ಹೊಸಪೇಟೆ ಗ್ರಾಮದ ಮೂಲ ದುರ್ಗಾದೇವಿ ದೇವಸ್ಥಾನ, ಮತ್ತು ನಾಗದೇವರ ಸಪ್ತಮ ವರ್ಧಂತಿ ಮಹೋತ್ಸವ ಅಂಗವಾಗಿ ಸದ್ಗುರು ಅಪ್ಪಾಜಿ ಸಾನ್ನಿಧ್ಯದಲ್ಲಿ ಭಾನುವಾರ ಹಂದರಗಂಬ ಪೂಜೆ ನೆರವೇರಿಸಲಾಯಿತು.

ಅನಂತರ ಸದ್ಗುರು ಅಪ್ಪಾಜಿ ಅವರು ಮಾತನಾಡಿ, ಮೇ 11ರ ಸೋಮವಾರ ಬೆಳಗ್ಗೆ ದೇವಸ್ಥಾನ ಆವರಣದಲ್ಲಿ ಭಕ್ತರಿಂದ ತುಲಾಭಾರ ಸೇವೆ ನಡೆಯಲಿದೆ. ದುರ್ಗಾದೇವಿಯ ಜಾತ್ರಾ ಮಹೋತ್ಸವದ ನಿಮಿತ್ತ ಆನೆ ಅಂಬಾರಿ ಸಮೇತ ಕೊಡಿಯಾಲ ಗ್ರಾಮದ ದುಂಡಿ ಬಸವೇಶ್ವರ ದೇವಸ್ಥಾನದಿಂದ ರಾಜ್ಯದ ವಿವಿಧ ಕಲಾ ತಂಡದೊಂದಿಗೆ ಕುಂಭಮೇಳ ಜರುಗಲಿದೆ. ಮೇ 12ರಂದು ಬೆಳಗ್ಗೆ 8 ಗಂಟೆಗೆ, ಕ್ಷೇತ್ರಪಾಲಕ ನೂತನ ಅಷ್ಟದಳ ಪದ್ಮ ಪೀಠ ಪ್ರತಿಷ್ಠಾ ಕಾರ್ಯ ಸೇರಿದಂತೆ ಆದ್ಯಗಣಯಾಗ, ನಿರ್ವಿಘ್ನಯಾಗ, ಪಂಚವಿಂಶತಿ ಕಳಸಾರಾಧನೆ, ಪ್ರಧಾನಯಾಗ, ಕುಂಭಾಭಿಷೇಕ ಹಾಗೂ ಶ್ರೀ ಕಾಳಿ ಸಹಸ್ರನಾಮ ಕದಳಿಯಾಗ ಜರುಗಲಿದೆ. ಅದೇ ದಿನ ಸಂಜೆ ನಾಗ ತನುತರ್ಪಣ ಸೇವೆ, ಆಶ್ಲೇಷ ಬಲಿ ಪ್ರಸನ್ನ ಪೂಜೆ ನಡೆಯಲ್ಲಿದ್ದು, ಭಕ್ತರು ಭಾಗವಹಿಸಲು ತಿಳಿಸಿದರು.

ದೇವಸ್ಥಾನ ಸಮಿತಿ ಟ್ರಸ್ಟಿ ನಾಗರಾಜ್ ಕುರವತ್ತಿ ಮಾತನಾಡಿ, ಜಾತ್ರಾ ಕಾರ್ಯಕ್ರಮದಲ್ಲಿ ಕುಂಭ ಹೊರಲು ಬಯಸುವ ತಾಯಂದಿರು ದೇವಸ್ಥಾನ ಸಮಿತಿಯವರನ್ನು ಸಂಪರ್ಕಿಸಲು ಕೋರಿದರು. ಈ ಸಂದರ್ಭ ಪಾರ್ವತಮ್ಮ ಕರಡೆಪ್ಪನವರ್, ಟ್ರಸ್ಟಿನ್ಯಾಯವಾದಿವೀರೇಶ್‌ಅಜ್ಜಣ್ಣನವರ, ಪ್ರಕಾಶ್‌ಕರಡೆಪ್ಪನವರ್, ಈರಣ್ಣ ಹೊನ್ನಪ್ಪನವರ್, ಷಣ್ಮುಖ ಪೂಜಾರ್, ಕಂಚಿಕೇರಿ ಕರಿಬಸಣ್ಣ, ಗಂಗಾಧರ ಕಮಲಾಪುರ, ಕಾರ್ತೀಕ್, ಗುರು ಬಸವರಾಜ ಸೇರಿದಂತೆ ಇತರರಿದ್ದರು.

ಶೈಕ್ಷಣಿಕ ಚಟುವಟಿಕೆ | ಚನ್ನಗಿರಿ ಕ್ಷೇತ್ರ ಶಾಸಕ ಬಸವರಾಜು ಶಿವಗಂಗಾ ಸಲಹೆ | ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಕಾಲೇಜಿನ ಕಾರ್ಯಕ್ರಮ

ವಿದ್ಯಾರ್ಥಿಗಳು ಉತ್ತಮ ಹೆಸರು ತರುವ ಪ್ರಜೆಗಳಾಗಬೇಕು

• **ಕನ್ನಡಪ್ರಭ ವಾರ್ತೆ** ಚನ್ನಗಿರಿ

ಪದವಿ ಮುಗಿಸಿ ಹೊಸ ಜೀವನವನ್ನು ಕಟ್ಟಿಕೊಳ್ಳಲುಸಿದ್ಧವಾಗಿರುವವಿದ್ಯಾರ್ಥಿಗಳಾದನೀವುಗಳು ಸಮಾಜದಲ್ಲಿ ಮಾದರಿ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ತಂದೆ-ತಾಯಿ ಮತ್ತು ವಿದ್ಯಾಭ್ಯಾಸ ಮಾಡಿದ ಕಾಲೇಜಿಗೆ ಉತ್ತಮ ಹೆಸರು ತರುವಂತಹಪ್ರಜೆಗಳಾಗಿಬೆಳೆದುಸಮಾಜದಲ್ಲಿ ಜೀವನ ನಡೆಸಬೇಕು ಎಂದು ಶಾಸಕ ಬಸವರಾಜು ವಿ. ಶಿವಗಂಗಾ ಹೇಳಿದರು.

ಬುಧವಾರ ಪಟ್ಟಣದ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್, ಯುವ ರೆಡ್ ಕ್ರಾಸ್, ರೋವರ್ಸ ಮತ್ತು ರೇಂಜರ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ತಂದೆ- ತಾಯಿ, ಪೋಷಕರು ಮಕ್ಕಳನ್ನೇ ಸಮಾಜದ ಆಸ್ತಿಯನ್ನಾಗಿ ಮಾಡಲು ನಿಮಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ಪದವಿ ಮುಗಿದ ನಂತರಯಾವುದೇಉದ್ಯೋಗವನ್ನುಮಾಡಿರಿ.



ಸಮಾರೋಪ ಸಮಾರಂಭವನ್ನು ಶಾಸಕ ಬಸವರಾಜು ವಿ.ಶಿವಗಂಗಾ ಉದ್ಘಾಟಿಸಿದರು.

ಅದರಲ್ಲಿ ಶ್ರದ್ಧೆ ಮತ್ತು ಪ್ರಾಮಾಣಿಕತೆ ಇಟ್ಟುಕೊಂಡು ಕೆಲಸ ಮಾಡಬೇಕು. ಶಿಕ್ಷಣದ ಜೊತೆಗೆ ಸಂಸ್ಕಾರ ಬೆಳೆಸಿಕೊಂಡು ಕಲಿತಾಗ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಬರಲಿದೆ ಎಂದರು.

ಶಾಸಕನಾದ ಮೇಲೆ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇನೆ. ಈ ಸರ್ಕಾರಿ ಡಿಗ್ರಿ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ₹4.30 ಕೋಟಿ ಅನುದಾನ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಕಾಲೇಜಿನ ಸಭೆ, ಸಮಾರಂಭಗಳನ್ನು ನಡೆಸಲು ಆಡಿಟೋರಿಯಂ ಇದ್ದು, ಇದಕ್ಕೆ ಬೇಕಾದ ಮೂಲ ಸೌಲಭ್ಯಗಳಿಲ್ಲ. ಸಭಾಂಗಣ ನವೀಕರಣಕ್ಕೆ ₹90 ಲಕ್ಷ ಅನುದಾನ ನೀಡಿದ್ದು, ಕಾಮಗಾರಿಗೆ ಸಂಬಂಧಿಸಿದ ಟೆಂಡರ್‌ಪ್ರಕ್ರಿಯೆ ಆರಂಭಗೊಂಡಿದೆ. ಶೀಘ್ರದಲ್ಲಿಯೇ ಕಾಮಗಾರಿಯೂ ಪ್ರಾರಂಭಿಸಲಾಗುವುದು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಬಿ.ಜಿ. ಅಮೃತೇಶ್ವರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯೋಜನಾಧಿಕಾರಿ ಜಿ.ಎಸ್. ಸುರೇಶ್, ಡಾ.ಪಾರ್ವತಮ್ಮ, ಕಲ್ಲೇಶಪ್ಪ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಜ್ಯೋತಿಪ್ರಸಾದ್, ಶಿವರಾಜ್, ಮಧುಕುಮಾರ್, ಸಿ.ರಮೇಶ್, ಲಿಯಾಕತ್ ಆಲಿ, ಡಾ.ಮಂಜುಳಾ, ಡಾ.ಲಕ್ಷ್ಮಣ್‌ನಾಯ್ಕ್, ಪ್ರಸನ್ನ, ರಮೇಶ್, ಮಂಜುಳ, ಸುರೇಶ್, ಶಕುಂತಲ, ಅಮೂಲ್ಯ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಉಪನ್ಯಾಸಕರು ಹಾಜರಿದ್ದರು.

ಬಹುಭಾಷೆಗಳ ಅರಿವು ಬಹಳ ಮುಖ್ಯ: ಸಾಗರ್

ಅಂತರರಾಷ್ಟ್ರೀಯಶಿಕ್ಷಣತಜ್ಞಎ.ಎಚ್.ಸಾಗರ್‌ಮಾತನಾಡಿ, ಮನುಷ್ಯನಿಗೆಬಹುಭಾಷೆಗಳ ಜ್ಞಾನ ಬಹಳ ಮುಖ್ಯವಾಗಿದೆ. ವಿಜ್ಞಾನವನ್ನು ಅಧ್ಯಯನ ಮಾಡದೇ ಇದ್ದರೆ, ಇಂದಿನ ಯುವಪೀಳಿಗೆಗೆಭವಿಷ್ಯವಿಲ್ಲ. ವಿಜ್ಞಾನ, ವಾಣಿಜ್ಯ, ಕಲಾವಿಭಾಗದಲ್ಲಿಅಭ್ಯಾಸಮಾಡಿದರೂ ಡಾಕ್ಟರ್, ಎಂಜಿನಿಯರ್‌ಆಗುವ ಅವಕಾಶಗಳಿವೆ. ಇಂದಿನ ವಿದ್ಯಾರ್ಥಿಗಳಿಗೆ ಬಹಳಷ್ಟು ಆಯ್ಕೆಗಳು ಕಣ್ಣಮುಂದೆ ಇವೆ. ಸರಿಯಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅಭ್ಯಾಸ ನಡೆಸಿದಾಗ ಉನ್ನತ ಸ್ಥಾನಗಳು ಲಭಿಸಲಿವೆ ಎಂದರು. ಪ್ರಸ್ತುತ ಅಧಿಕಾರದಲ್ಲಿ ಇರುವವರಿಗೆ ಇಂದಿನ ಯುವಪೀಳಿಗೆ ಬುದ್ಧಿವಂತರಾಗುವುದು ಬೇಡವಾಗಿದೆ. ಯುವಜನರು ಬುದ್ಧಿವಂತರಾದರೆನಮ್ಮನ್ನೇಪ್ರಶ್ನೆಮಾಡುತ್ತಾರೆಎಂಬಮನೋಭಾವಅವರಲ್ಲಿದೆ. ಪ್ರತಿಯೊಬ್ಬರಲ್ಲಿಯೂ ಸಂಶೋಧನಾತ್ಮಕ ಮನೋಭಾವನೆ ಬರಬೇಕು. ಪ್ರಜಾಪ್ರಭುತ್ವ ಉಳಿಯಬೇಕಾದರೆ ಪ್ರಶ್ನೆ ಮಾಡುವ ಮನೋಭಾವ ಎಲ್ಲರಲ್ಲಿಯೂ ಬರಬೇಕಾಗಿದೆ ಎಂದರು.

ದಾವಣಗೆರೆಯ ಬೇತೂರು ಬ್ರಿಡ್ಜ್ ವರೆಗೆ ಸಂಪರ್ಕ ಕಲ್ಪಿಸುವ ರಿಂಗ್ ರೋಡ್ ರಸ್ತೆಯನ್ನು ₹11 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಶೈಕ್ಷಣಿಕ ಸುಧಾರಣೆ ಬಗ್ಗೆ ಗಮನಹರಿಸುವೆ. ಯಾವುದೇ ಪ್ರದೇಶ ಅಭಿವೃದ್ಧಿಯಲ್ಲಿ ಹಿಂದುಳಿಯದಂತೆ ನೋಡಿಕೊಳ್ಳುವೆ. ಪ್ರತಿ ವಾರ್ಡಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಬಲಪಡಿಸುವುದು, ಜಿಲ್ಲಾಸ್ಪತ್ರೆಯ ಎಂಆರ್ಐ ಸ್ಕ್ಯಾನ್, ಚಾಮರಾಜಪೇಟೆ ಮಹಿಳಾ-ಮಕ್ಕಳ ಆಸ್ಪತ್ರೆಯಲ್ಲಿ ತುರ್ತು ಘಟಕ, ಆಂಬ್ಯುಲೆನ್ಸ್ ಸೇವೆಗಳ ಕೊರತೆಗೆ ಪರಿಹಾರ ಕಂಡುಕೊಳ್ಳಲಾಗುವುದು.

• **ಸಮರ್ಥ ಎಂ.ಶಾಮನೂರು** ಶಾಸಕ, ದಾವಣಗೆರೆ ದಕ್ಷಿಣ ಕ್ಷೇತ್ರ.

ಸುದ್ದಿ ಸಿಂಚನ

ಹಿರಿಯ ಕ್ರಿಕೆಟ್ ಪಟು ರಮೇಶ ನಿಧನ: ಸಂತಾಪ



ದಾವಣಗೆರೆ: ದಾವಣಗೆರೆ ಎನ್ಆರ್ಎಚ್ ಸೈಕಲ್ ಮಾರ್ಟ್ ಮಾಲೀಕ, ದಾವಣಗೆರೆ ಫ್ರೆಂಡ್ಸ್ ಕ್ರಿಕೆಟ್ ಕ್ಲಬ್ ನಾಯಕನಾಗಿದ್ದ ಎನ್.ಆರ್.ಎಚ್. ರಮೇಶ (51) ಇಲ್ಲಿನ ಕೆಟಿಜೆ ನಗರದ 15ನೇ ಕ್ರಾಸ್, 2ನೇ ಮೇನ್‌ನಲ್ಲಿರುವ ತಮ್ಮ ನಿವಾಸದಲ್ಲಿ ಬುಧವಾರ ಸಂಜೆನಿಧನರಾಗಿದ್ದಾರೆ. ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು, ಸಹೋದರ, ಮೂವರು ಸಹೋದರಿಯರು ಸೇರಿದಂತೆ ಬಂಧು-ಬಳಗ ಇದ್ದಾರೆ. ದಾವಣಗೆರೆ ಗಾಂಧಿ ನಗರ ಸಮೀಪದ ವೀರಶೈವ ರುದ್ರಭೂಮಿಯಲ್ಲಿ ಮೇ 7ರಂದು ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ. 90ರ ದಶಕದಲ್ಲಿ ದಾವಣಗೆರೆ ಸೇರಿದಂತೆ ನೆರೆಹೊರೆಯ ಜಿಲ್ಲೆಗಳಲ್ಲಿ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯ, ಪಂದ್ಯಾವಳಿಗಳಲ್ಲಿ ಭರ್ಜರಿ ಸಿಕ್ಸರ್‌ಬಾರಿಸುವ ಮೂಲಕ ಕ್ರಿಕೆಟ್ ಪ್ರೇಮಿಗಳನೆಚ್ಚಿನಆಟಗಾರನಾಗಿ ರಮೇಶಸಾಧನೆ ಮಾಡಿದ್ದರು. ಎನ್ಆರ್ಎಚ್ ರಮೇಶ ನಿಧನಕ್ಕೆ ಎಫ್‌ಸಿಸಿ ತಂಡದ ಹಿರಿಯ ಆಟಗಾರರು, ದಾವಣಗೆರೆ ಕ್ರಿಕೆಟ್ ಕ್ಲಬ್ ಸೇರಿದಂತೆ ವಿವಿಧ ಕ್ರಿಕೆಟ್ ಕ್ಲಬ್‌ಗಳ ಹಿರಿಯ ಆಟಗಾರರು ತೀವ್ರ ಸಂತಾಪ ಸೂಚಿಸಿದ್ದಾರೆ.

ಹುಲ್ಲಿನ ಬಣವೆಗೆ ಬೆಂಕಿ



ನ್ಯಾಮತಿ: ತಾಲೂಕಿನ ರಾಮೇಶ್ವರ ಗ್ರಾಮದಲ್ಲಿ ರೈತರು ಜಾನುವಾರುಗಳಿಗೆ ಸಂಗ್ರಹಿಸಿದ್ದ ಮೂರು ಹುಲ್ಲಿನ ಬಣವೆಗಳಿಗೆ ಆಕಸ್ಮಿಕ ಬೆಂಕಿ ತಗುಲಿದ ಘಟನೆ ಮಂಗಳವಾರ ನಡೆದಿದೆ. ರಾಮೇಶ್ವರದ ರಾಜಪ್ಪ ಎಡವಾಲ, ಗಂಗಪ್ಪ ದೇವಿಕೊಪ್ಪದ ಹಾಗೂ ವೀರಭದ್ರಪ್ಪ ಎಂಬ ರೈತರು ತಮ್ಮ ಜಾನುವಾರುಗಳಿಗೆ ಹುಲ್ಲನ್ನು ಸಂಗ್ರಹಿಸಿ, ಬೃಹತ್ ಬಣವೆಗಳನ್ನು ಹಾಕಿಕೊಂಡಿದ್ದರು. ಆದರೆ ಬಣವೆಗಳಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಸಂಪೂರ್ಣ ಹುಲ್ಲು ಸುಟ್ಟು ಬೂದಿಯಾಗಿದೆ. ಬಣವೆಗಳಿಗೆ ಬೆಂಕಿ ಬಿದ್ದ ಕೂಡಲೇ ಹೊನ್ನಾಳಿ ಅಗ್ನಿಶಾಮಕ ದಳದವರಿಗೆ ಮಾಹಿತಿ ನೀಡಲಾಯಿತು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ, ಹೆಚ್ಚಿನ ಅನಾಹುತ ತಪ್ಪಿಸಿದರು. ಕಂದಾಯಇಲಾಖೆ ವಿ.ಎ. ವೇಣುಗೋಪಾಲ ಇದ್ದರು.

ಮಂಜುನಾಥ್ ನಿಧನ



ಮಲೇಬೆನ್ನೂರು: ಇಲ್ಲಿಗೆ ಸಮೀಪದ ಬೆಳ್ಳೂಡಿ ಗ್ರಾಮದ ಎಸ್. ಮಂಜುನಾಥ್ ಗೌಡ (55) ಅನಾರೋಗ್ಯದ ಕಾರಣ ಮಂಗಳವಾರ ಬೆಳಗ್ಗೆ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಬಂಧುಗಳಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸಂಜೆ ನೆರವೇರಿತು.

ಉಕ್ಕಡಗಾತ್ರಿ ಷಣ್ಮುಖ ನಿಧನ



ನ್ಯಾಮತಿ: ಪಟ್ಟಣದ ಕುಂಬಾರ ಬೀದಿಯ ಅಮ್ಮನ ಮರದ ಹತ್ತಿರ ವಾಸವಾಗಿದ್ದ ಹೋಟೆಲ್ ಉದ್ಯಮಿ ದಿವಂಗತ ಉಕ್ಕಡಗಾತ್ರಿ ಗುಡ್ಡಪ್ಪ ಅವರ ಪುತ್ರ ಉಕ್ಕಡಗಾತ್ರಿ ಷಣ್ಮುಖ (51) ಅನಾರೋಗ್ಯದಿಂದ ಶಿವಮೊಗ್ಗ ಆಸ್ಪತ್ರೆಯಲ್ಲಿ ಮಂಗಳವಾರ ಸಂಜೆ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಮತ್ತು ಬಂಧು-ಬಳಗ ಇದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ರುದ್ರಭೂಮಿಯಲ್ಲಿ ನೆರವೇರಿತು.

ವಿಪಕ್ಷ ಸೇರಿ ಎಲ್ಲರೂ ಅಭಿವೃದ್ಧಿ ಕೆಲಸ ಮಾಡೋಣ

ದಕ್ಷಿಣ ಕ್ಷೇತ್ರದ ಬಡವರಿಗೆ ಬಾಡಿಗೆ ಮನೆಯಿಂದ ಮುಕ್ತಿ ಕೊಡಿಸಲು ಪ್ರಾಮಾಣಿಕ ಯತ್ನ: ನೂತನ ಶಾಸಕ ಸಮರ್ಥ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಚುನಾವಣೆ ವೇಳೆ ಪಕ್ಷಗಳ ಮಧ್ಯೆ ಪೈಪೋಟಿ ಸಹಜ. ನಂತರವಿಪಕ್ಷಗಳೂಸೇರಿದಂತೆಎಲ್ಲರೂಒಟ್ಟಾಗಿಕೆಲಸ ಮಾಡಬೇಕು. ಏನೇ ಅಭಿವೃದ್ಧಿ ಕೆಲಸಗಳಿದ್ದರೂ ಹೇಳಿ ಮಾಡೋಣ. ನಮ್ಮ ಮನೆ-ಕಚೇರಿ-ಮನದ ಬಾಗಿಲು ಎಲ್ಲರಿಗೂಸದಾ, ದಿನದ24 ಗಂಟೆಯೂತೆರೆದಿರುತ್ತದೆ ಎಂದು ದಾವಣಗೆರೆ ದಕ್ಷಿಣ ಕ್ಷೇತ್ರದ ನೂತನ ಶಾಸಕ ಸಮರ್ಥ ಎಂ. ಶಾಮನೂರು ಹೇಳಿದ್ದಾರೆ.

ನಗರದಲ್ಲಿಬುಧವಾರದಾವಣಗೆರೆದಕ್ಷಿಣಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾದ ನಂತರ ಕ್ಷೇತ್ರದ ಮತದಾರರು, ಪಕ್ಷದ ಮುಖಂಡರು, ಕಾರ್ಯಕರ್ತರು, ಹಿತೈಷಿಗಳಿಗೆ ಕೃತಜ್ಞತೆ ಅರ್ಪಿಸಿ ಅವರು ಮಾತನಾಡಿದರು. ಕ್ಷೇತ್ರದಲ್ಲಿ ವಸತಿ ಸಮಸ್ಯೆ ಇದೆ. ಬಾಡಿಗೆ ಮನೆಯಿಂದ ಮುಕ್ತಿ ಸಿಗಬೇಕೆಂಬ ನಿರೀಕ್ಷೆಯಲ್ಲಿ ಜನರಿದ್ದಾರೆ. ಆದಷ್ಟು ಬೇಗನೆ ಸರ್ಕಾರದಿಂದ ಆಶ್ರಯ ಸೇರಿದಂತೆ ವಿವಿಧ ವಸತಿ ಯೋಜನೆಯಡಿ ಸೂರು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

ಆಶ್ರಯ ಸೇರಿದಂತೆ ಸರ್ಕಾರದ ವಿವಿಧ ವಸತಿ ಯೋಜನೆಗಳ ಬಗ್ಗೆ ಅಧ್ಯಯನ ಮಾಡಿ, ಜನರಿಗೆ ಸೂರುಕಲ್ಪಿಸುವನಿಟ್ಟಿನಲ್ಲಿಪ್ರಯತ್ನಿಸುವೆ. ಯಾವುದೇ ಕ್ಷೇತ್ರ ಅಭಿವೃದ್ಧಿಯಾಗಬೇಕೆಂದರೆ ಅಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರದ ಸುಧಾರಣೆ ಅತಿ ಮುಖ್ಯವಾಗಿರುತ್ತದೆ. ಈನಿಟ್ಟಿನಲ್ಲಿದಕ್ಷಿಣಕ್ಷೇತ್ರದವ್ಯಾಪ್ತಿಯಲ್ಲಿ ಶಾಲಾ, ಪಿಯು, ಪದವಿ ಕಾಲೇಜುಗಳನ್ನು ತರಲು, ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲು, ಹೊಸ ಆಸ್ಪತ್ರೆ ನಿರ್ಮಿಸುವ ಬಗ್ಗೆಯೂ ಜಿಲ್ಲಾ ಸಚಿವರಾದ ತಮ್ಮ ತಂದೆ ಎಸ್.ಎಸ್. ಮಲ್ಲಿಕಾರ್ಜುನ, ಸಂಸದರಾದ ತಮ್ಮ ತಾಯಿ ಡಾ.ಪ್ರಭಾ ಮಲ್ಲಿಕಾರ್ಜುನ ಅವರ ಬಳಿ ಚರ್ಚೆ ನಡೆಸುವೆ ಎಂದು ತಿಳಿಸಿದರು.



ದಾವಣಗೆರೆಯಲ್ಲಿ ಬುಧವಾರ ದಕ್ಷಿಣದ ನೂತನ ಶಾಸಕ ಸಮರ್ಥ ಎಂ.ಶಾಮನೂರು ಸುದ್ದಿಗೋಷ್ಠಿಯಲ್ಲಿ ಮತದಾರರು, ಮುಖಂಡರು, ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದರು.

- ನಮ್ಮ ಮನೆ, ಕಚೇರಿ, ಮನದ ಬಾಗಿಲು ದಿನದ 24 ಗಂಟೆ ಜನರಿಗಾಗಿ ತೆರೆದಿರುತ್ತೆ
- ಜನರ ಜೊತೆ ಬೆರೆಯುತ್ತಿದ್ದ ತಾತ ಶಾಮನೂರು ದಾರಿಯಲ್ಲೇ ಸಾಗುವೆ–ನೂತನ ಶಾಸಕ

ಕ್ಷೇತ್ರದಜನರಿಗೆಅನುಕೂಲಆಗುವಂತೆಕ್ಷೇತ್ರದಲ್ಲಿ ಜನಸಂಪರ್ಕ ಕಚೇರಿ ಸ್ಥಾಪಿಸುವ ಆಲೋಚನೆ ಇದೆ. ಜನ ಸಾಮಾನ್ಯರ ಆಶೋತ್ತರಕ್ಕೆ ಸ್ಪಂದಿಸಿ, ಕೆಲಸ ಮಾಡುವುದಕ್ಕೆ ತಾವು ಬದ್ಧರಿದ್ದು, ಎಲ್ಲರನ್ನೂ ಜೊತೆ ಜೊತೆಗೆ ಕೊಂಡೊಯ್ಯುವ ಮೂಲಕ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಗುರಿ ಇದೆ. ತಮ್ಮ ತಾತ ದಿವಂಗತ ಶಾಮನೂರು ಶಿವಶಂಕರಪ್ಪನವರು ಪ್ರತಿನಿಧಿಸುತ್ತಿದ್ದ ಕ್ಷೇತ್ರವನ್ನು ವಿಧಾನಸೌಧದಲ್ಲಿ ಪ್ರತಿನಿಧಿಸುತ್ತಿದ್ದೇನೆ. ಕ್ಷೇತ್ರದ ಬಗ್ಗೆ ತಾತ ಹೊಂದಿದ್ದ ಕಾಳಜಿ, ಅಭಿಮಾನವನ್ನು ನಾನೂ ಹೊಂದಿದ್ದು, ಮಾದರಿ ಕ್ಷೇತ್ರ ಮಾಡುವತ್ತ ಗಮನ ಹರಿಸುತ್ತೇನೆ ಎಂದರು.

ಅಜ್ಜನವರರೀತಿಯೇನಾನೂಸದಾಜನರೊಂದಿಗೆ ಬೆರೆಯುವಂತಹವನು. ಇಲ್ಲಿನಮಟ್ಟಿಕಲ್ಲುಪ್ರದೇಶದ 150 ಮನೆಗಳ ಸಮಸ್ಯೆ ಇರುವ ವಿಚಾರ ನನಗೂ ಗೊತ್ತಿದೆ. ಮಾಜಿಪ್ರಧಾನಿಇಂದಿರಾಗಾಂಧಿಯವರು ಹೇಳಿದಂತೆರೋಟಿ, ಕಪಡಾಔರ್‌ಮಕಾನ್‌ಪೈಕಿಈಗ ಮೊದಲಿನಎರಡೂಇವೆ. ಈಗಎಲ್ಲರಿಗೂಬೇಕಾಗಿರುವುದು ಮಕಾನ್. ಅಂತಹ ಮಕಾನ್ (ಮನೆ)ಗಳನ್ನು ಜನರಿಗೆ ಕಲ್ಪಿಸುವಲ್ಲಿ ತಮ್ಮ ಪ್ರಾಮಾಣಿಕ ಪ್ರಯತ್ನ ಇದ್ದೇಇರುತ್ತದೆ. ಕ್ಷೇತ್ರದಯಾವುದೇಸಮಸ್ಯೆಗಳಿದ್ದರೆ ನಮ್ಮನ್ನು ನೇರವಾಗಿ ಸಂಪರ್ಕಿಸಬಹುದು ಎಂದು ಜನತೆಗೆ ಮನವಿ ಮಾಡಿದರು.

ಈಗಲೇ ಸಚಿವ ಸ್ಥಾನದಂತಹ ವಿಚಾರಗಳನ್ನು ನನಗೆ ಕೇಳಬೇಡಿ. ಅಂತಹ ಜವಾಬ್ದಾರಿಯೂ ನನಗೆ ಈಗಲೇ ಬೇಡ. ನನಗಿಂತಲೂ ಹಿರಿಯರು ಅನೇಕರಿದ್ದಾರೆ. ಅಲ್ಲದೇ, ಅದೆಲ್ಲಾ ನಮ್ಮ ಹಿರಿಯರ ನಿರ್ಧಾರವಾಗಿರುತ್ತದೆ. ಹಿರಿಯರೇ ಅದನ್ನೆಲ್ಲಾ ನೋಡಿಕೊಳ್ಳುತ್ತಾರೆ. ನನಗೆ ನನ್ನ ಕ್ಷೇತ್ರದ ಅಭಿವೃದ್ಧಿ, ಜನರ ಆಶೋತ್ತರಕ್ಕೆ ಸ್ಪಂದಿಸುವುದಷ್ಟೇ ಮುಖ್ಯ. ಯಾವುದೇ ಕ್ಷೇತ್ರದ ಅಭಿವೃದ್ಧಿ ಆಗಲು ಶಿಕ್ಷಣ, ಆರೋಗ್ಯ ಕ್ಷೇತ್ರದ ಸುಧಾರಣೆ ಮುಖ್ಯ. ಆ ನಿಟ್ಟಿನಲ್ಲಿ ಕೆಲಸ ಮಾಡುವೆ ಎಂದು ನೂತನ ಶಾಸಕ ಸಮರ್ಥ ಶಾಮನೂರು ಸ್ಪಷ್ಟಪಡಿಸಿದರು.

ದೂಡಾ ಅಧ್ಯಕ್ಷ ದಿನೇಶ ಕೆ. ಶೆಟ್ಟಿ, ಮಾಜಿ ಮೇಯರ್‌ಗಳಾದ ಕೆ.ಚಮನ್ ಸಾಬ್, ಅನಿತಾಬಾಯಿಮಾಲತೇಶ, ದಕ್ಷಿಣಬ್ಲಾಕ್‌ಕಾಂಗ್ರೆಸ್‌ಅಧ್ಯಕ್ಷ, ದೂಡಾ ಮಾಜಿ ಅಧ್ಯಕ್ಷ ಅಯೂಬ್ ಪೈಲ್ವಾನ್, ಮಂಜುಳಮ್ಮ, ಎ.ನಾಗರಾಜ್, ಹದಡಿ ಜಿ.ಸಿ. ನಿಂಗಪ್ಪ, ವರುಣ್, ಯುವರಾಜ ಇದ್ದರು.

ಎಲ್ಲರ ಆಶೋತ್ತರಕ್ಕೆ ತಕ್ಕಂತೆ ಕೆಲಸ ಮಾಡುವೆ

ದಕ್ಷಿಣಕ್ಷೇತ್ರದಚುನಾವಣೆವೇಳೆನನ್ನಗೆಲುವಿಗಾಗಿಸಿಎಂ, ಡಿಸಿಎಂ, ಸಚಿವರು, ಕಾಂಗ್ರೆಸ್‌ನಾಯಕರು, ವಿವಿಧ ಪಕ್ಷ, ಸಂಘಟನೆಗಳು, ಸಮುದಾಯಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಹೀಗೆ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಿ, ಶಾಸಕನಾಗಿ ಆಯ್ಕೆ ಮಾಡಿದ್ದಾರೆ. ಆ ಎಲ್ಲರ ಆಶೋತ್ತರಕ್ಕೆ ತಕ್ಕಂತೆ ಜನ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುವೆ ಎಂದು ಶಾಸಕ ಸಮರ್ಥ ಶಾಮನೂರು ಹೇಳಿದರು.

ಸರ್ಕಾರದಿಂದಜನರಿಗೆಸೌಲಭ್ಯಕಲ್ಪಿಸಲು, ಕ್ಷೇತ್ರದಅಭಿವೃದ್ಧಿಗೆತಮ್ಮತಂದೆ, ಸಚಿವಎಸ್.ಎಸ್. ಮಲ್ಲಿಕಾರ್ಜುನ, ತಾಯಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ ಸೇರಿದಂತೆ ಎಲ್ಲರ ಸಹಕಾರದಲ್ಲಿ ಮಾದರಿ ಕ್ಷೇತ್ರ ಮಾಡುವ ಗುರಿ ಹೊಂದಿದ್ದೇನೆ. ಆಶ್ರಯ ಸೇರಿದಂತೆ ಸೂರು ಕಲ್ಪಿಸುವ ಯೋಜನೆಗೆ ಒತ್ತು ನೀಡಲಾಗುವುದು. ಬಾಡಿಗೆ ಮನೆಯಲ್ಲಿರುವವರು, ಸ್ವಂತ ನಿವೇಶನ ಇಲ್ಲದವರಿಗೆ ಸ್ಲಂ ಬೋರ್ಡ್, ಆಶ್ರಯದಡಿ ಮನೆ, ನಿವೇಶನ ಒದಗಿಸುವುದಕ್ಕೆ ಮೊದಲ ಆದ್ಯತೆ. ಹಕ್ಕುಪತ್ರ ವಿತರಣೆ, ಜಾಗದ ಹಂಚಿಕೆ ಬಗ್ಗೆ ಅಧಿಕಾರಿಗಳೊಡನೆ ಚರ್ಚಿಸುವೆ. ದಾವಣಗೆರೆ ಹೆಗ್ಡೆನಗರದ 436 ಕುಟುಂಬಕ್ಕೆ ಹಕ್ಕುಪತ್ರ ನೀಡಿದೆ. ಚುನಾವಣೆ ಇದ್ದ ಕಾರಣ ಅಭಿವೃದ್ಧಿ ಕೆಲಸ ಸ್ವಲ್ಪ ತಡವಾಗಿದ್ದವು. ಮುಂದೆ ಕಾಮಗಾರಿ ವೇಗ ಪಡೆಯಲಿವೆ ಎಂದರು.

ಕನ್ನಡ ಸಾಹಿತ್ಯ ಬೆಳೆಸುವಲ್ಲಿ ಕಸಾಪದಿಂದ ಹೆಚ್ಚಿನ ಶ್ರಮ

ಕಸಾಪ ಸಂಸ್ಥಾಪಕ ದಿನಾಚರಣೆಯಲ್ಲಿ ಚನ್ನಬಸಪ್ಪ



ಸಮಾರಂಭವನ್ನು ತಾಲೂಕು ಕ.ಸಾ.ಪ. ಮಾಜಿ ಅಧ್ಯಕ್ಷ ಚನ್ನಬಸಪ್ಪ ಉದ್ಘಾಟಿಸಿದರು.

ಚನ್ನಗಿರಿ: ಕನ್ನಡಸಾಹಿತ್ಯಪರಿಷತ್‌ಪ್ರಗತಿಪರವಾಗಿ, ದಲಿತ, ಕೃಷಿಪರ ಹಾಗೂ ಮಹಿಳಾ ಚಿಂತನಾ ಗೋಷ್ಠಿಗಳಿಂದ ಹಿಡಿದು ಸರ್ವಕಾಲಕ್ಕೂ ಮಹತ್ವಪೂರ್ಣ ಎನ್ನಿಸಿಕೊಳ್ಳುವಂತಹ ಸಾಹಿತ್ಯದ ಚಟುವಟಿಕೆಗಳನ್ನು ಮಾಡುತ್ತಾ ಕನ್ನಡ ಸಾಹಿತ್ಯ ಬೆಳೆಸುವಲ್ಲಿ ಪರಿಷತ್ ಯಶಸ್ವಿಯಾಗುತ್ತಿದೆ ಎಂದು ತಾಲೂಕು ತಾಲೂಕು ಕ.ಸಾ.ಪ. ಮಾಜಿ ಅಧ್ಯಕ್ಷಸಾಂಸ್ಕೃತಿಕಚಿಂತಕಎಂ.ಯು.ಚನ್ನಬಸಪ್ಪ ಹೇಳಿದರು.

ಮಂಗಳವಾರ ಪಟ್ಟಣದ ನಿವೃತ್ತ ನೌಕರರ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದಹಮ್ಮಿಕೊಂಡಿದ್ದ112ನೇಸಂಸ್ಥಾಪನಾ ದಿನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡಸಾಹಿತ್ಯಪರಿಷತ್‌ಕನ್ನಡ ಸಾಹಿತ್ಯ, ನಾಡು, ನುಡಿ, ರಕ್ಷಣೆಗಾಗಿ ಕನ್ನಡ ಸಾಹಿತ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಸಾಹಿತ್ಯ ಸಮ್ಮೇಳನಗಳನ್ನು, ದತ್ತಿ ಕಾರ್ಯಕ್ರಮಗಳು, ಕವಿಗೋಷ್ಠಿಗಳು, ವಿಚಾರ ಸಂಕಿರಣಗಳಂತಹ ಕಾರ್ಯಕ್ರಮ ಮಾಡುತ್ತ ಕನ್ನಡ ಸಾಹಿತ್ಯ ಬೆಳೆಸುವ ಸೇವೆ ಮಾಡುತ್ತಿದೆ ಎಂದರು.

ತಾಲೂಕು ಕ.ಸಾ.ಪ. ಅಧ್ಯಕ್ಷ ಎಲ್.ಜಿ. ಮಧುಕುಮಾರ್‌ಮಾತನಾಡಿ 112ನೇ ವರ್ಷಗಳ ಹಿಂದೆಯೇ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಗೊಂಡು ಇದನ್ನು ಸ್ಥಾಪನೆ ಮಾಡಲು ಶ್ರಮಿಸಿದದಂತಹ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್, ಸರ್‌ಎಂ.ವಿಶ್ವೇಶ್ವರಯ್ಯ ಹಾಗೂ ಮಿರ್ಜಾ ಇಸ್ಮಾಯಿಲ್ ಅವರ ಸೇವೆಗಳ ಬಗ್ಗೆ ಸ್ಮರಿಸಿದರು.

ನಿವೃತ್ತ ನೌಕರರ ಸಂಘದ ಅಧ್ಯಕ್ಷ ಜಿ.ಎಂ. ಉಜ್ಜಿನಪ್ಪ, ಕಸಬಾ ಹೋಬಳಿ ಘಟಕ ಅಧ್ಯಕ್ಷ ಜಿ.ಚಿನ್ನಸ್ವಾಮಿ ಮಾತನಾಡಿದರು. ಹೊದಿಗೆರೆ ಪ್ರಭಾಕರ್, ಕ.ಸಾ.ಪ. ಪ್ರಮುಖರಾದ ಬಿ.ಸಿ. ಸಿದ್ದಪ್ಪ, ಓಂಕಾರಮೂರ್ತಿ, ಮಲ್ಲಿಕಾರ್ಜುನ್, ಮಣ್ಣಮ್ಮ ಕಾಲೇಜಿನ ಪ್ರಾಚಾರ್ಯ ರವಿಕುಮಾರ್, ಇಸ್ಮಾಯಿಲ್, ರುದ್ರಪ್ಪ, ರವಿಪ್ರಕಾಶ್‌ಮೊದಲಾದವರುಉಪಸ್ಥಿತರಿದ್ದರು.

ವರದಿಗಾರರ ಕೂಟಕ್ಕೆ ಸ್ವಂತ ಜಾಗ: ಶಾಸಕರಿಗೆ ಮನವಿ

ದಾವಣಗೆರೆ ಜಿಲ್ಲಾ ವರದಿಗಾರರ ಕೂಟದಿಂದ ಗೌರವ ಸ್ವೀಕರಿಸಿದ ಸಮರ್ಥ ಶಾಮನೂರು

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾದ ಸಮರ್ಥ ಎಂ. ಶಾಮನೂರು ಅವರಿಗೆಬುಧವಾರಜಿಲ್ಲಾವರದಿಗಾರರ ಕೂಟದಿಂದ ಅಭಿನಂದಿಸಿ, ಶುಭ ಕೋರಲಾಯಿತು.



ಶಾಸಕ ಸಮರ್ಥ ಅವರಿಗೆ ಜಿಲ್ಲಾ ವರದಿಗಾರರ ಕೂಟದಿಂದ ಸನ್ಮಾನಿಸಲಾಯಿತು.

ಶಾಸಕ ಸಮರ್ಥ ಈ ಸಂದರ್ಭ ಮಾತನಾಡಿ, ಮಾಧ್ಯಮದವರಜೊತೆಗೆ ತಾವು ಸದಾ ಇರುವುದಾಗಿ, ಸರ್ಕಾರದಿಂದ ಸಿಗಬಹುದಾದ ಸೌಲಭ್ಯ ಕಲ್ಪಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದು ಭರವಸೆ ನೀಡಿದರು.

ಜಿಲ್ಲಾವರದಿಗಾರರಕೂಟಕಳೆದ18 ವರ್ಷದಿಂದ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಈ ವಿಚಾರ ಈಗಷ್ಟೇ ತಮ್ಮ ಗಮನಕ್ಕೆ ಬಂದಿದೆ. ಜಿಲ್ಲಾ ಸಚಿವರು, ಸಂಸದರ ಜೊತೆಗೆ ಚರ್ಚಿಸಿ ಆದಷ್ಟು ಬೇಗನೇ ಜಾಗ ಒದಗಿಸಲು ಶ್ರಮಿಸುವೆ. ಉದ್ದೇಶಿತ ಜಾಗದಲ್ಲಿ ವಾಸ್ತುಪ್ರಕಾರವೇಕೂಟಕ್ಕೆಸ್ವಂತಸೂರು ಕಟ್ಟುವ ಕೆಲಸ ಮಾಡೋಣ ಎಂದರು.

ಕೂಟದ ಪದಾಧಿಕಾರಿಗಳು ಮಾತನಾಡಿ, ವರದಿಗಾರರ ಕೂಟಕ್ಕೆ ಸುಸಜ್ಜಿತ ಕಟ್ಟಡ ನಿರ್ಮಿಸಲು ಈಗಾಗಲೇ ಜಾಗವನ್ನು ಸಚಿವರು ನೋಡಿದ್ದು, ಅದೇ ಜಾಗವನ್ನು ಅಂತಿಮಗೊಳಿಸಿ ಮಂಜೂರುಮಾಡಿಕೊಡಬೇಕು. ಜಿಲ್ಲಾ ವರದಿಗಾರರ ಕೂಟ ಅಸ್ತಿತ್ವಕ್ಕೆ ಬಂದು 18 ವರ್ಷಗಳು ಕಳೆದರೂ ಇದುವರೆಗೂ ಸ್ವಂತ ನಿವೇಶನ ಇಲ್ಲ. ಈ ಕುರಿತು ಜಿಲ್ಲಾ ಸಚಿವರುಹಾಗೂಸಂಸದರಿಗೂಮನವಿ ಸಲ್ಲಿಸಿದ್ದೇವೆ. ಈ ಹಿಂದೆ ನೋಡಿದ ಜಾಗವನ್ನೇ ಕೂಟಕ್ಕೆ ನಿ ಹಸ್ತಾಂತರಿಸಲು ಕ್ರಮ ಕೈಗೊಳ್ಳ ಬೇಕು ಎಂದರು.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಶಾಸಕ ಸಮರ್ಥ ಶಾಮನೂರು, ತಂದೆ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಹಾಗೂ ತಾಯಿ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನರ ಜೊತೆ ಚರ್ಚಿಸಿ, ಅಗತ್ಯ ಜಾಗ ಮಂಜೂರು ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ. ಆದಷ್ಟು ಬೇಗ ಸಿಹಿ ಸುದ್ದಿ ನೀಡುತ್ತೇವೆ ಎಂದು ಭರವಸೆ ನೀಡಿದರು.

ಕೂಟದ ಪ್ರಧಾನ ಕಾರ್ಯದರ್ಶಿ ಎಂ.ವೈ. ಸತೀಶ್, ಪದಾಧಿಕಾರಿಗಳಾದ ಸಿಕಂದರ್, ಬಸವ ರಾಜ ದೊಡ್ಮನಿ, ಪಿಆರ್‌ಒ ಲೋಕೇಶ, ಟಿ.ಎಸ್. ತಿಪ್ಪೇಸ್ವಾಮಿ, ನಿಂಗಪ್ಪ, ಚನ್ನವೀರಯ್ಯ, ಕೂಟದ ಸದಸ್ಯರು ಉಪಸ್ಥಿತರಿದ್ದರು.

ಇತಿಹಾಸ ವಿಚಾರ | ಅಧಿಕಾರಿಗಳಿಗೆ ಡಿಸಿ ಗಂಗಾಧರ ಸ್ವಾಮಿ ಸೂಚನೆ | ಶಾಸನ–ಸ್ಮಾರಕಗಳ ಸಂರಕ್ಷಣೆ ಕುರಿತು ಸಭೆ

ಐತಿಹಾಸಿಕ ಸ್ಮಾರಕಗಳ ಸಮೀಕ್ಷೆ ಪೂರ್ಣಗೊಳಿಸಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಜಿಲ್ಲೆಯಾದ್ಯಂತ ಇರುವ ಅಪರೂಪದ ಶಿಲಾಶಾಸನಗಳು, ಹಸ್ತಪ್ರತಿಗಳು ಹಾಗೂ ಐತಿಹಾಸಿಕ ಸ್ಮಾರಕಗಳನ್ನು ಗುರುತಿಸಿ, ಅವುಗಳ ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಚುರುಕುಗೊಳಿಸಿ ಮೇ 15 ರೊಳಗೆ ಸಮೀಕ್ಷೆ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿಅಧಿಕಾರಿಗಳಿಗೆಸೂಚನೆನೀಡಿದರು.

ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿರುವ ಶಾಸನ ಮತ್ತು ಸ್ಮಾರಕಗಳ ಸಂರಕ್ಷಣೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ 'ಜ್ಞಾನ ಭಾರತಂಮಿಷನ್' ಯೋಜನೆಯಡಿರಾಜ್ಯದಾದ್ಯಂತ ಲಭ್ಯ ಅಮೂಲ್ಯ ಹಸ್ತಪ್ರತಿಗಳ ಸಮೀಕ್ಷೆ, ಸಂರಕ್ಷಣೆ, ಡಿಜಿಟಲೀಕರಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಶತಮಾನಗಳ ಇತಿಹಾಸವಿರುವ ಹಳೆಯ ಕೈಬರಹದ ಹಸ್ತಪ್ರತಿಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಜ್ಞಾನದ ಸಂಪತ್ತನ್ನು ಹಸ್ತಾಂತರ ಯೋಜನೆ ಮುಖ್ಯ ಉದ್ದೇಶ ಎಂದರು.

ದೇಶಾದ್ಯಂತಇರುವಹಸ್ತಪ್ರತಿಗಳಮಾಹಿತಿಯನ್ನು ಸಂಗ್ರಹಿಸಿ 'ರಾಷ್ಟ್ರೀಯ ಭಂಡಾರ' ನಿರ್ಮಿಸಲಾಗುವುದು. ಕರ್ನಾಟಕದಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಈ ಯೋಜನೆ ಅನುಷ್ಠಾನಕ್ಕಾಗಿ ರಾಜ್ಯಮಟ್ಟದ ನೋಡಲ್ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಸಮಿತಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಸಮಿತಿಗಳನ್ನು ರಚಿಸಿ ಯೋಜನೆ ಯಶಸ್ವಿಗೊಳಿಸಲು ಸೂಚಿಸಲಾಗಿದೆ ಎಂದರು.

ಗ್ರಂಥಾಲಯಗಳು, ದೇವಾಲಯಗಳು, ಮಠಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿರುವ ಖಾಸಗಿ ಸಂಗ್ರಹದ ಹಸ್ತಪ್ರತಿಗಳನ್ನು ಗುರುತಿಸಿ ದಾಖಲಿಸುವುದು, ಸಮೀಕ್ಷಾ ತಂಡಗಳಿಗೆ ಅಗತ್ಯ ಸಹಕಾರ ನೀಡುವುದು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವುದು ಈ ಸಮಿತಿಗಳ ಕರ್ತವ್ಯವಾಗಿದೆ. ರಾಜ್ಯದ ಒಟ್ಟು 17 ಜಿಲ್ಲೆಗಳಲ್ಲಿ ಈಗಾಗಲೇ ಸಮೀಕ್ಷೆ ಆರಂಭವಾಗಿದೆ. ಏಪ್ರಿಲ್ 27ರ ವೇಳೆಗೆ ಸುಮಾರು 2,13,255 ಹಸ್ತಪ್ರತಿಗಳ ಮಾಹಿತಿ ಸಂಗ್ರಹಿಸಲಾಗಿದೆ.



ಡಿಸಿ ಗಂಗಾಧರ ಸ್ವಾಮಿ ಕರ್ನಾಟಕದ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆ ಪೋಸ್ಟರ್ ಬಿಡುಗಡೆ ಮಾಡಿದರು.

ದಾವಣಗೆರೆ ಜಿಲ್ಲೆಯಲ್ಲಿಯೂ ಹಸ್ತಪ್ರತಿಗಳ ಮಾಹಿತಿ ಹಂಚಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಈ ಯೋಜನೆ ಮೂಲಕ ರಾಜ್ಯವಾರು ಸಮಗ್ರ ದತ್ತಾಂಶ ಭಂಡಾರ ನಿರ್ಮಾಣವಾಗಲಿದೆ. ಜಿಐಎಸ್ ಆಧಾರಿತ ರಾಷ್ಟ್ರೀಯ ಹಸ್ತಪ್ರತಿ ಸಂಗ್ರಹ ನಕ್ಷೆ ಅಭಿವೃದ್ಧಿಪಡಿಸಲಾಗುವುದು. ಇದರಿಂದ ಅಪರೂಪದ, ನಾಶ ಭೀತಿಯಲ್ಲಿರುವ ಹಸ್ತಪ್ರತಿಗಳನ್ನು ಗುರುತಿಸಿ ಸಂರಕ್ಷಿಸಲು ಸಾಧ್ಯವಾಗುತ್ತದೆ. ಸಾರ್ವಜನಿಕರು ಮತ್ತು ಸಂಸ್ಥೆಗಳು ತಮ್ಮಲ್ಲಿರುವ ಹಸ್ತಪ್ರತಿಗಳ ಮಾಹಿತಿಯನ್ನು ನೀಡಿ ಈ ರಾಷ್ಟ್ರೀಯ ಕಾರ್ಯಕ್ಕೆ ಸಹಕರಿಸಬೇಕು. ಸಮೀಕ್ಷಾ ಕಾರ್ಯದ ಸಿಬ್ಬಂದಿ ಕಡ್ಡಾಯವಾಗಿ ಕ್ಷೇತ್ರ ಕಾರ್ಯ ಕೈಗೊಳ್ಳಬೇಕು. ತಹಸೀಲ್ದಾರ್/ಜಿಲ್ಲಾಮಟ್ಟದ ಅಧಿಕಾರಿಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ, ಈ ಎಲ್ಲ ಸಮೀಕ್ಷಾ ಕಾರ್ಯಗಳನ್ನು ಮೇ 15ರೊಳಗೆ ಕಡ್ಡಾಯ ಮುಕ್ತಾಯಗೊಳಿಸಬೇಕು ಎಂದು ಸೂಚಿಸಿದರು.

ಸಮೀಕ್ಷಾ ಕಾರ್ಯದಲ್ಲಿ ಜಿಲ್ಲೆಯಲ್ಲಿ ಹರಿಹರೇಶ್ವರ ದೇವಸ್ಥಾನ, ಪಾಂಡವ ಮಠ, ತಾವರೆಕೆರೆಯ ಶಿಲಾಮಠ, ಚನ್ನಗಿರಿಯ 2 ಶಿಲಾಮಠ, ಜಗಳೂರಿನ ಪುರಾತನ ಮಠಗಳು, ಹದಡಿ ಮತ್ತು ಆಣಬೇರುವಿನ ಹಳೆಯ ಕೋಟೆಗಳು, ಹೊನ್ನಾಳಿಯ ಹಿರೇಕಲ್ಲು ಮಠ, ಕಲ್ಲೇಶ್ವರ, ಭೀಮೇಶ್ವರ ದೇವಸ್ಥಾನಗಳಲ್ಲಿರುವ ಐತಿಹಾಸಿಕ ದಾಖಲೆ ಪರಿಶೀಲಿಸಲು ಸೂಚಿಸಿದರು.

ಜಿಲ್ಲೆ, ದೇಶದ ಸಾಂಸ್ಕೃತಿಕ ಪರಂಪರೆ ರಕ್ಷಣೆ ಎಲ್ಲರ ಆದ್ಯ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ಇತರ ಮಾಧ್ಯಮಗಳಲ್ಲಿ ಐತಿಹಾಸಿಕ ಸ್ಮಾರಕಗಳ ಚಿತ್ರಗಳನ್ನು ಅಸಭ್ಯವಾಗಿ, ವಿಕೃತ/ದುರುದ್ದೇಶಪೂರಿತವಾಗಿ ಬಳಸುತ್ತಿರುವುದು ಗಮನಕ್ಕೆ ಬಂದಿದೆ. ಇಂತಹ ಚಟುವಟಿಕೆಗಳು ರಾಷ್ಟ್ರದ ಘನತೆಗೆ ಕುಂದು ಎಂದು ಆತಂಕ ವ್ಯಕ್ತಪಡಿಸಿದರು.

ಸ್ಮಾರಕಗಳ ಫೋಟೋಗಳನ್ನು ವಿರೂಪಗೊಳಿಸುವುದು ಅಥವಾ ಅವುಗಳನ್ನು ಬಳಸಿ ಸಮಾಜದಲ್ಲಿ ತಪ್ಪು ಸಂದೇಶ ರವಾನಿಸುವ ವ್ಯಕ್ತಿಗಳ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಲು ಸೂಚಿಸಲಾಗಿದೆ. ರಾಷ್ಟ್ರೀಯ ಪರಂಪರೆಗೆ ಧಕ್ಕೆ ತರುವಂತಹ ಯಾವುದೇ ಚಟುವಟಿಕೆಗಳನ್ನು ಗಂಭೀರ ಅಪರಾಧವೆಂದು ಪರಿಗಣಿಸಲಾಗುವುದು. ಸಾರ್ವಜನಿಕರು, ಪ್ರವಾಸಿಗರು ಸ್ಮಾರಕಗಳ ಬಳಿ ಫೋಟೋ ತೆಗೆಯುವಾಗ ಆ ಸ್ಥಳದ ಪಾವಿತ್ರ್ಯತೆ ಮತ್ತು ಐತಿಹಾಸಿಕ ಮಹತ್ವಕ್ಕೆ ಧಕ್ಕೆ ಬಾರದಂತೆ ನಡೆದುಕೊಳ್ಳಬೇಕು ಎಂದರು.

ಹವ್ಯಾಸಿ ಸಂಶೋಧಕ ಮತ್ತು ಶಾಸನ ಸಂರಕ್ಷಕ ಹಿ.ಗು.ದುಂಡೇಪ್ಪ ಅವರು ಸಂರಕ್ಷಿಸಿರುವ ತಾಳೆಗರಿಯನ್ನು ಜಿಲ್ಲಾಧಿಕಾರಿ ವೀಕ್ಷಿಸಿದರು ಮತ್ತು ತಾಳೆಗರಿಗಳನ್ನು ಸಂರಕ್ಷಣೆ ಮಾಡಲು ಕ್ರಮವಹಿಸುವುದಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ಕರ್ನಾಟಕದ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆ ಎಂಬ ಪೋಸ್ಟರ್‌ಬಿಡುಗಡೆ ಮಾಡಲಾಯಿತು. ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ, ಎಎಸ್‌ಪಿ ಪರಮೇಶ್ವರ ಹೆಗಡೆ, ಮಹಾನಗರ ಪಾಲಿಕೆ ಆಯುಕ್ತೆ ಮತ್ತು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಮಮತಾ ಗೌಡರ್, ಸಿಪಿಐಮಲ್ಲಾನಾಯಕ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕಿ ಕಾವ್ಯ, ಕೇಂದ್ರ ಪುರಾತತ್ವ ಇಲಾಖೆ ಅಧಿಕಾರಿಗಳು , ಶಾಸನ ಸಂರಕ್ಷಣೆಯ ಸಮಿತಿಯ ಸದಸ್ಯರು ಹಾಗೂ ಇತರರು ಉಪಸ್ಥಿತರಿದ್ದರು.

8, 9ರಂದು ಜಿಎಂ ವಿವಿಯಲ್ಲಿ ಮಲ್ಲಿಕಾ 26.0 ವಾರ್ಷಿಕ ಸಾಂಸ್ಕೃತಿಕ ಉತ್ಸವ



ದಾವಣಗೆರೆ: ನಗರದ ಜಿಎಂ ವಿಶ್ವವಿದ್ಯಾಲಯದಲ್ಲಿ ಮೇ 8 ಮತ್ತು 9ರಂದು ಶೈಕ್ಷಣಿಕ ಸಾಧನೆ ಮತ್ತು ಸಾಂಸ್ಕೃತಿಕ ಪ್ರತಿಭೆಗಳ ಅಪೂರ್ವ ಸಂಗಮವಾಗಿರುವ ಮಲ್ಲಿಕಾ 26.0 ವಾರ್ಷಿಕ ಸಾಂಸ್ಕೃತಿಕ ಉತ್ಸವ ನಡೆಯಲಿದೆಎಂದುಜಿಎಂವಿವಿಯಮಾರ್ಕೆಟಿಂಗ್ ಮತ್ತು ಪ್ರಮೋಷನ್ ಡೀನ್ ಡಾ. ಟಿ.ಎಂ. ವೀರಗಂಗಾಧರ ಸ್ವಾಮಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಮೇ 8ರಂದು ಸಂಜೆ 6.30ಕ್ಕೆ ಕಾರ್ಯಕ್ರಮ ಉದ್ಘಾಟನೆ ಆಗಲಿದೆ. ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ್ ಕೋರೆ, ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ಸಿ.ಸಿ.ಪಾಟೀಲ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ನಟ ನೆನಪಿರಲಿ ಪ್ರೇಮ್ ವಿಶೇಷ ಅತಿಥಿಯಾಗಿ ಆಗಮಿಸಲಿದ್ದು, ಕೇಂದ್ರದ ಮಾಜಿ ಸಚಿವ ಡಾ. ಜಿ.ಎಂ. ಸಿದ್ದೇಶ್ವರ್ ಅಧ್ಯಕ್ಷತೆ ವಹಿಸಲಿ ದ್ದಾರೆ. ಜಿ.ಎಂ. ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ.ಲಿಂಗರಾಜು, ಕುಲಪತಿ ಡಾ. ಎಸ್.ಆರ್. ಶಂಕಪಾಲ್ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿಶ್ರೀಮತಿ ಜಿ.ಎಂ. ಹಾಲಮ್ಮ ಮತ್ತು ಶ್ರೀ ಜಿ. ಮಲ್ಲಿಕಾರ್ಜುನಪ್ಪ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಕೊಡಲ್ಪಡುವ ಕಾಲೇಜು ಮಟ್ಟದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅದ್ಭುತ ಸಾಧನೆ ತೋರಿದ 9.5ಕ್ಕಿಂತ ಹೆಚ್ಚು ಸಿಜಿಪಿಎ ಪಡೆದ ಜಿಎಂ ಶಿಕ್ಷಣ ಸಂಸ್ಥೆಯ ನಾಲ್ವರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಗುವುದು. ಜೊತೆಗೆ ವಿಟಿಯು ರ‍್ಯಾಂಕ್ ವಿಜೇತ ಜಿಎಂ ಶಿಕ್ಷಣ ಸಂಸ್ಥೆಯ ನಾಲ್ವರು ಸಾಧಕರಿಗೆ ಕಾಲೇಜು ಶುಲ್ಕವನ್ನೆಲ್ಲಾ ವಾಪಸ್ ನೀಡುವ ಮೂಲಕ ಶೈಕ್ಷಣಿಕ ಸಾಧನೆಗೆ ಪ್ರಶಂಸೆ ವ್ಯಕ್ತಪಡಿಸಲಾಗುವುದು ಎಂದರು.

2ನೇ ದಿನ ಸಂಜೆ 6.30 ಗಂಟೆಗೆ ಸಮಾರೋಪ ನಡೆಯಲಿದೆ. ಭೀಮಸಮುದ್ರದ ಶ್ರೀಶೈಲ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಜಿ.ಎಂ. ಪ್ರಸನ್ನಕುಮಾರ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಜಿ.ಎಂ. ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ. ಲಿಂಗರಾಜು, ಸಹ ಉಪ ಕುಲಪತಿ ಡಾ. ಎಂ. ವೇಣುಗೋಪಾಲ ರಾವ್, ಕುಲಸಚಿವ ಡಾ. ಬಿ.ಎಸ್. ಸುನೀಲ್ ಕುಮಾರ್‌ಉಪಸ್ಥಿತಿಯಲ್ಲಿ ಕುಲಪತಿ ಡಾ. ಎಸ್.ಆರ್. ಶಂಕಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಖ್ಯಾತ ಗಾಯಕ ವಿಜಯ ಪ್ರಕಾಶ್ ಅವರಿಂದ ಸಂಗೀತ ಸಂಜೆ ನಡೆಯಲಿದೆ. ಇದೇ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿ ವ್ಯವಹಾರಗಳ ನಿರ್ದೇಶನಾಲಯದ ನಿರ್ದೇಶಕ ಡಾ. ಎಚ್.ಎಸ್. ಕಿರಣ್ ಕುಮಾರ್ ಮಾತನಾಡಿ, ತಮ್ಮ ನೇತೃತ್ವದಲ್ಲಿ ನಡೆವ ಮಲ್ಲಿಕಾ ಉತ್ಸವವು ಕಲೆ, ಸಂಗೀತ, ನೃತ್ಯ, ನಾಟಕ ಮತ್ತು ಕ್ರೀಡೆಗಳಂತಹ ವಿವಿಧ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರದರ್ಶಿಸುವ ಕಾರ್ಯಕ್ರಮವಾಗಿದೆ. ಮಣಿಪಾಲ್, ಮೈಸೂರು, ಬೆಳಗಾವಿ ಹಾಗೂ ಬಳ್ಳಾರಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳ 20ಕ್ಕೂ ಹೆಚ್ಚು ಸಂಸ್ಥೆಗಳ ಸುಮಾರು 900ಕ್ಕೂ ಅಧಿಕ ಎಂಜಿನಿಯರಿಂಗ್ ಮತ್ತು ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ. ಎಂ.ಸಂತೋಷ್ ಕುಮಾರ, ಅಭಿಷೇಕ್, ಅರ್ಜುನ್, ಜಿ.ಎಸ್. ವಸಂತ ಕುಮಾರ ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ: ಬೆಸ್ಕಾಂನಿಂದ ನಗರದ ಸಾಯಿ ಫೀಡರ್‌ವ್ಯಾಪ್ತಿಯಲ್ಲಿ ಜಲಸಿರಿ 24x7 ಜಲಸಿರಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 7ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ಎಸ್.ಎಸ್.ಲೇಔಟ್ ಎ ಬ್ಲಾಕ್, ಅಥಣಿ ಕಾಲೇಜು, ಎಂಬಿಎ ಕಾಲೇಜು, ಇಂಡೋರ್‌ಸ್ಟೇಡಿಯಂ ಹಾಗೂ ಸುತ್ತಮುತ್ತಲ ಪ್ರದೇಶ ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಆರೋಗ್ಯ ಕಾರ್ಯಾಗಾರ

ದಾವಣಗೆರೆ: ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದಿಂದ ಮೇ 7ರಂದು ರಂದು ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಡಿ 'ಅಭಿವೃದ್ಧಿ ವಿಳಂಬ ಹೊಂದಿರುವ ಶಿಶುಗಳಿಗಾಗಿ ಉತ್ತೇಜನ ತಂತ್ರಗಳು' ಎಂಬ ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಇಲ್ಲಿನ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಮಧ್ಯಾಹ್ನ 3.30 ಗಂಟೆಗೆ ನಗರದ ಕಾಂಪೊಜಿಟ್ ರೀಜನಲ್ ಸೆಂಟರ್ ಉಪನ್ಯಾಸಕ, ಫಿಜಿಯೋಥೆರಪಿಸ್ಟ್ ಇ.ತಮರೈ ಸೆಲ್ವನ್ ಮಾಹಿತಿ ನೀಡುವರು ಎಂದು ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ.

